# “ಭೀಮಸೇನಸಮೋನಾಸ್ತಿ”

## ಭೀಮಸೇನದೇವರ ಜನ್ಮ –

ಇತೀರಿತೇ ಪೃಥಯಾಹೂತವಾಯು
ಸಂಸ್ಪರ್ಶಮಾತ್ರಾದಭವದ್ಬಲದ್ವಯೇ ।
ಸಮೋ ಜಗತ್ಯಸ್ತಿ ನ ಯಸ್ಯ ಕಶ್ಚಿದ್ಭಕ್ತೌ
ಚ ವಿಷ್ಣೋರ್ಭಗವದ್ವಶ: ಸುತ: ।

ಕುಂತಿದೇವಿಯು ವಾಯುದೇವರನ್ನು ಪಾಂಡುಮಹಾರಾಜನ ಅನುಜ್ಞೆಯಂತೆ ಕರೆಯಲು, ವಾಯುದೇವರ ಸ್ಪರ್ಶ ಮಾತ್ರದಿಂದಲೇ, ಬಲಗಳಲ್ಲಿಯೂ ಮತ್ತು ವಿಷ್ಣುಭಕ್ತಿಯಲ್ಲಿಯೂ ಅಸಮಾನರಾದ ಭೀಮಸೇನದೇವರು ಅವತರಿಸಿದರು. ಆದ್ದರಿಂದ ಭೀಮಸೇನದೇವರು ಸ್ಪರ್ಶಮಾತ್ರದಿಂದಲೇ ಜನಿಸಿದರೇ ಹೊರತು ಬೇರೆ ಬೇರೆ ರೀತಿಯಲ್ಲಲ್ಲ. 5 ರೀತಿಜನ್ಮಗಳು ಸಂತಾನೋತ್ಪತ್ತಿ ಸಾಧಕಗಳು – ಇಚ್ಛ, ಸಂಭಾಷಣ, ವೀಕ್ಷಣ, ಸ್ಪರ್ಶ, ಮಿಥುನ

## ಭೀಮಸೇನ ಶಬ್ಧದ ಅರ್ಥ

– ಸ ವಾಯುರೇವಾಭವದತ್ರಭೀಮನಾಮಾ
ಭೃತಾ ಮಾ: ಸಕಲಾ ಹಿ ಯಸ್ಮಿನ್ ।
ಸ ವಿಷ್ಣುನೇಶೇನ ಯುತ: ಸದೈವ ನಾಮ್ನಾ
ಸೇನೋ ಭೀಮಸೇನಸ್ತತೋಸೌ ।

- ಸಕಲವಿದ್ಯೆಗಳನ್ನೂ ಪೂರ್ಣವಾಗಿ ಧರಿಸಿರುವುದರಿಂದ "ಭೀಮ". ಸ್ವಾಮಿಯಾದ ಶ್ರೀಹರಿಯಿಂದ ಸದಾ ಒಡಗೂಡಿಯೇ ಇರುವನು. ಆದ್ದರಿಂದ ಅವನ ಹೆಸರು "ಸೇನ" ಆದ್ದರಿಂದಲೇ "ಭೀಮಸೇನ". ಆದರೆ ಕೆಲವರು ಭೀಮಸೇನ ಎಂದರೆ ಭಯಂಕರ ಎಂದು ತಿಳಿದಿದ್ದಾರೆ. ಭೀಮ - ಭಯರಹಿತ, ಅಭಯದಾಯಕ ಎಂದು ಛಾಂದೋಗ್ಯಭಾಷ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸಿರುವರು.

**ಭೀಮನ ರೂಪ** –

ಭೀಮಸೇನನನ್ನು ಕೆಲವರು ಭಾರೀ ದೇಹದವನೆಂದೂ, ಬುದ್ಧಿ ಕಮ್ಮಿಯೆಂದೂ, ಕೆಟ್ಟ ರೂಪವಿರುವನೆಂದೂ ಚಿತ್ರಣ ಮಾಡಿದ್ದಾರೆ. ಆದರೆ 32 ಸಲ್ಲಕ್ಷಣೋಪೇತವಾದ ಅವರು ಎಲ್ಲರಿಗಿಂತ ಸುಂದರರು. ವಾಯುದೇವರ ಮೂಲ ರೂಪದಂತೆಯೇ ತಮ್ಮ ಅವತಾರ ರೂಪಗಳಾದ ಎಲ್ಲ ರೂಪಗಳಲ್ಲೂ ಅವರದು ಸುಂದರ ರೂಪ "ಸುಂದರಮೂರುತಿ ಮುಖ್ಯಪ್ರಾಣ" ಎಂಬರ ದಾಸರ ವಾಕ್ಯದಂತೆ. ಅವರನ್ನು ವಿಕಾರವಾಗಿ ಚಿತ್ರಿಸುವುದು ಸ್ವೋತ್ತಮದ್ರೋಹವಾಗುತ್ತದೆ.

**ಶತಶ್ರುಂಗ ಪುಡಿಪುಡಿಯಾಯಿತು** –

ತಜ್ಜನ್ಮಮಾತ್ರೇಣ ಧರಾ ವಿದಾರಿತಾ
ಶಾರ್ದೂಲಭೀತಾಜ್ಜನನೀಕರಾದ್ಯದಾ ।
ಪಪಾತ ಸಂಚೂರ್ಣಿತ ಏವ ಪರ್ವತ-
ಸ್ತೇನಾಖಿಲೋಸೌ ಶತಶೃಂಗನಾಮಾ ।

– ಭೀಮಸೇನ ಜನಿಸಿದ ಮೇಲೆ ಕುಂತಿ, ತನ್ನ ಮಂಗಳಸ್ನಾನವಾದ ಮೇಲೆ (10ನೇ ದಿನ) ದೇವತೆಗಳನ್ನು ಪೂಜಿಸಲೆಂದು ಬೆಟ್ಟದ ಮೇಲೆ ತೆರಳಿದ್ದಳು. ಆಗೊಂದು ಹುಲಿ ಗುಹೆಯಿಂದ ಹೊರಬಂದಿತು. ಪಾಂಡುರಾಜ ಆ ಹುಲಿಯನ್ನು ಸಂಹರಿಸಿದಾಗ, ಆ ಹುಲಿ ಆರ್ತನಾದ ಮಾಡಿ ಕೆಳಗೆ ಬಿದ್ದಿತು. ಆಗ ಕುಂತಿ ಅದರ ಧ್ವನಿಯನ್ನು ಕೇಳಿ ಬಿದ್ದುಬಿಟ್ಟಾಗ, ಅವಳ ಕೈಲಿದ್ದ ಮಗು ಭೀಮಸೇನ ದೇವರು ಕೈಜಾರಿ ಬಿದ್ದಿತು. ಆ ಮಗು ಬಿದ್ದಾಗ ಇಡೀ ಶತಶೃಂಗ ಪರ್ವತವೇ ಹೋಳಾಗಿತು. ಭೀಮಸೇನದೇವರು ಹುಟ್ಟಿದಾಗ ಶತಶೃಂಗ ಪರ್ವತ ಪುಡಿಯಾದಂತೆ, ಅಸುರರು ಭಯಗೊಂಡರು.

**ವಿದ್ಯಾಭ್ಯಾಸ** – ಇವರು ತಮ್ಮ ಆರಂಭಿಕ ಅಸ್ತ್ರವಿದ್ಯಾಭ್ಯಾಸವನ್ನು ಮಾಡಿದ್ದು ಕೃಪಾಚಾರ್ಯರ ಬಳಿ ನಂತರದಲ್ಲಿ ದ್ರೋಣಾಚಾರ್ಯರಲ್ಲಿ. ವಿದ್ಯಾಭ್ಯಾಸ ಸಮಯದಲ್ಲಿ ಅಲ್ಲಿದ್ದ ರಾಜಪುತ್ರರೆಲ್ಲ ಮರಗಳನ್ನು ಏರಿ ಹಣ್ಣುಗಳನ್ನು ಕೀಳಿ ತಿನ್ನಬೇಕೆಂದು ಹೊರಟಾಗ, ಭೀಮಸೇನ ಕೇವಲ ಕಾಲಿನಿಂದ ಆ ಮರಕ್ಕೇ ಒದ್ದು, ಆ ರಾಜಪುತ್ರರ ಸಮೇತ ಇಡೀ ಮರವನ್ನೇ ಬೀಳಿಸುತ್ತಿದ್ದರು. ಭೀಮಸೇನನು ಬಲರಾಮನಲ್ಲಿ ಗದಾಭ್ಯಾಸವನ್ನು ಮಾಡಿದನು. ಬಲರಾಮನು ಕೃಷ್ಣನಲ್ಲಿ ಕಲಿತಿದ್ದನ್ನು ಭೀಮನಿಗೆ ಸಮರ್ಪಿಸಿದನು. ವಿನೋದಕ್ಕೆಂದು ಬಲಜ್ಞಾನಾದಿಗಳಲ್ಲಿ ಅಮಿತಸ್ವರೂಪನಾದ ಅವನು ಬಾಹುಯುದ್ಧ ಮತ್ತು ವಾಗ್ಯುದ್ಧ ಎರಡರಲ್ಲೂ ಬಲರಾಮನನ್ನು ಪರಾಭವಗೊಳಿಸಿದನು.

**ಸಕಲವಿದ್ಯಾ ಕೌಶಲ್ಯ** - ಭೀಮಸೇನ ಎಲ್ಲ ವಿಧದ ವಿದ್ಯೆಗಳಲ್ಲೂ ಚತುರನಾಗಿದ್ದನು, ಯುದ್ಧದಲ್ಲಿ, ದ್ವಂದ್ವ ಯುದ್ಧದಲ್ಲಿ, ಓಡುವುದರಲ್ಲಿ, ಹಾರುವುದರಲ್ಲಿ, ಈಜುವುದರಲ್ಲಿ, ಎಲ್ಲರನ್ನೂ ಶ್ರೀ ಹರಿಯ ಅನುಗ್ರಹದಿಂದ ಗೆಲ್ಲುತ್ತಿದ್ದ. ಭೀಮಸೇನನು ಆಟವಾಡುತ್ತಿದ್ದಾಗ, ಪಾಂಡವರು ಮತ್ತು ಕೌರವರು ಎಲ್ಲರನ್ನು ಎತ್ತಿಕೊಂಡು ಹೋಗಿ ಗಂಗೆಯಲ್ಲಿ ಮುಳುಗಿಸುತ್ತಿದ್ದನು ಮತ್ತು ಅವರು ಕಿರುಚಿಕೊಳ್ಳುತ್ತಿದ್ದಾಗ ಸಂತಸಗೊಳ್ಳುತ್ತಿದ್ದನು. ಕೆಲವು ಸಲ ಎಲ್ಲರನ್ನೂ ತನ್ನ ಹೆಗಲ ಮೇಲೆ ಹೊತ್ತುಕೊಂಡು ಗಂಗೆಯನ್ನು ದಾಟುತ್ತಿದ್ದನು.

**ಕೌರವರ ಕುತಂತ್ರ** – ಭೀಮಸೇನದೇವರನ್ನು ಗೆಲ್ಲಲಾಗದ ಕೌರವರೆಲ್ಲ ಸಭೆ ಸೇರಿ"ಭೀಮನೊಬ್ಬ ಹತನಾದರೆ ಉಳಿದ ಪಾಂಡವರೆಲ್ಲರೂ ಸತ್ತಂತೆಯೇ. ಇವನನ್ನು ಬಲದಿಂದ ಕೊಲ್ಲಲು ಅಸಾಧ್ಯವಾದ್ದರಿಂದ ಕುತಂತ್ರದಿಂದಲಾದರೂ ಕೊಲ್ಲೋಣ" ಎಂದು ಯೋಚಿಸಿದರು.

**ವಿಷಪ್ರಾಶನ** – ವಿಷದ ಲಡ್ಡುಗೆ ಉಂಡು ಜೀರ್ಣಿಸಿಕೊಂಡ ಕೂಸು – ಕ್ಷೀರಸಮುದ್ರಮಥನ ಕಾಲದಲ್ಲಿ ಹುಟ್ಟಿದ್ದ, ಶುಕ್ರಾಚಾರ್ಯರು ತಪಗೈದು ಶಿವನಿಂದ ಪಡೆದಿದ್ದ, ಶಕುನಿ ಶುಕ್ರಾಚಾರ್ಯರ ಮನವೊಲಿಸಿ ತಂದಿದ್ದ, ಕಾಲಕೂಟವಿಷವನ್ನು ಭೀಮನಿಗೆ, ಕೌರವರು ತಮ್ಮ ಅಡಿಗೆಯುವನ ಮೂಲಕ ಸಕಲಭಕ್ಷ್ಯಗಳಲ್ಲೂ, ಭೋಜ್ಯಗಳಲ್ಲೂ, ಬೆರೆಸಿ ನೀಡಿದರು. ಆದರೆ ಸಮುದ್ರಮಥನ ಕಾಲದಲ್ಲಿ ನೇರ ಕಾಲಕೂಟವಿಷವನ್ನೇ

ಕುಡಿದಿದ್ದ ವಾಯುದೇವರ ಅವತಾರರಾದ ಭೀಮಸೇನದೇವರು ಎಲ್ಲವನ್ನೂ ತಿಂದು ಜೀರ್ಣಿಸಿಕೊಂಡರು. ಅವರಲ್ಲಿ ಯಾವುದೇ ವಿಕಾರವಿರಲಿಲ್ಲ. ವಿಷತಿಂದಿದ್ದು ಭೀಮಸೇನನಾದರೂ, ಸಂಕಟಪಟ್ಟಿದ್ದು ಕೌರವರು.

**ಪ್ರಮಾಣಕೋಟಿಯಲ್ಲಿ ಭೀಮ** - ಕೌರವರು ಭೀಮಸೇನನು ವಿಷದ ಆಹಾರವನ್ನೆಲ್ಲ ತಿಂದು ಜೀರ್ಣಿಸಿಕೊಂಡಿದ್ದನ್ನು ಸೈರಿಸದೆ, ಗಂಗಾಪ್ರವಾಹದಲ್ಲಿ ಒಂದು ಪ್ರಮಾಣಕೋಟಿ ಎಂಬ ಸೌಧವನ್ನು ಕಟ್ಟಿ ಅಲ್ಲಿ ಭೀಮನನ್ನು, ಅಭಿಮಂತ್ರಿತವಾದ ಬಲವಾದ ಉಕ್ಕಿನ ಸರಪಳಿಗಳಿಂದ ಬಿಗಿದು, ಕೋಟಿ ಯೋಜನ ವಿಸ್ತಾರವುಳ್ಳ ಗಂಗಾಜಲದಲ್ಲಿ ಬೀಳಿಸಿದರು. ಭೀಮಸೇನನು ಕೇವಲ ಮೈ ಅಗಲಿಸುವುದರಿಂದಲೇ ಉಕ್ಕಿನ ಸರಪಳಿಗಳನ್ನು ತುಂಡಿರಿಸಿ, ಮೇಲೆ ಬಂದನು.

**ನಾಗಗಳ ಪ್ರಯೋಗ** – ನಂತರ ಕೌರವರು ಭೀಮನನ್ನು ಶುಕ್ರಾಚಾರ್ಯರ ಮಂತ್ರಬಲದಿಂದ ಎಂಟು ಮಹಾನಾಗಗಣಗಳನ್ನು ತಂದು, ಅವುಗಳನ್ನು ಭೀಮಸೇನನನ್ನು ಕೊಲ್ಲಲು ಬಿಟ್ಟರೆ, ಆ ಹಾವುಗಳು, ವಜ್ರದೇಹಿಯಾದ, ಭೀಮನ ವಕ್ಷ ಸ್ಥಳಕ್ಕೆ ಕಚ್ಚಲು, ಅವುಗಳ ದಂತಗಳೇ ಪುಡಿಪುಡಿಯಾದವು. ಭೀಮಸೇನನು ಆ ಎಂಟೂ ಮಹಾನಾಗಗಳ ಗುಂಪನ್ನು ತುಂಬಾ ದೂರಕ್ಕೆ ಎಸೆದು, ಆ ವಂಶದಲ್ಲಿ ಜನಿಸಿದ್ದ ಸರ್ಪಗಳನ್ನು ಇರುವೆಗಳನ್ನು ಹೊಸಕುವಂತೆ ಹೊಸಕಿ ಹಾಕಿ, ಸಾರಥಿಯನ್ನು ಮುಂಗೈ ಹೊಡೆತದಿಂದಲೇ ಸಂಹರಿಸಿದನು.

**ಭೀಮ ದಿಗ್ವಿಜಯ** – ನಂತರದಲ್ಲಿ ಭೀಮಸೇನನು ದಿಗ್ವಿಜಯಕ್ಕೆಂದು ಹೊರಟು, ಶಿಶುಪಾಲ, ದಂತವಕ್ತ್ರ, ವಸುದೇವನ ಪುತ್ರನಾದ ಪೌಂಡ್ರಕವಾಸುದೇವ, ರುಕ್ಮಿಣಿಯ ಸಹೋದರ ರುಗ್ಮಿ, ಅತ್ಯಂತ ಬಲಿಷ್ಠರಲ್ಲಿ ಒಬ್ಬನಾದ ಶಲ್ಯರಾಜ, ಏಕಲವ್ಯ, ಎಲ್ಲರನ್ನೂ ಗೆದ್ದು ಧೃತರಾಷ್ಟ್ರನಿಗೆ, ಅವರು ನೀಡಿದ ಕಪ್ಪಕಾಣಿಕೆಗಳನ್ನು ಸಮರ್ಪಿಸಿದನು. ನಂತರದಲ್ಲಿ ಜರಾಸಂಧನನ್ನೂ ಗೆದ್ದು, ಅವನ ವಶದಲ್ಲಿದ್ದ ಅಂಗರಾಜ್ಯದ ಅರ್ಧಭಾಗವನ್ನು ಗೆದ್ದು ಧೃತರಾಷ್ಟ್ರನಿಗೆ ನೀಡಿದನು. ಅದೇ ರಾಜ್ಯವನ್ನು ಮುಂದೆ ಕರ್ಣನಿಗೆ ದುರ್ಯೋಧನ ನೀಡಿದ್ದು.

**ವೇದವ್ಯಾಸರಿಂದ ತತ್ತ್ವಜ್ಞಾನ** – ಭೀಮಸೇನದೇವರು ಭಗವಾನ್ ವೇದವ್ಯಾಸರಲ್ಲಿ ವಿಶೇಷ ತತ್ತ್ವಜ್ಞಾನವನ್ನು ಪಡೆದರು. ಭೀಮಸೇನದೇವರು ಎಲ್ಲ ಅವೈಷ್ಣವ ಶಾಸ್ತ್ರದ ಪದ್ಧತಿಗಳನ್ನೂ ಧ್ವಂಸ ಮಾಡಿ, ಶುದ್ಧವಾದ ವೈಷ್ಣವ ಮಾರ್ಗವನ್ನೇ ಪ್ರತಿಪಾದಿಸಿ, ಹರಿಸರ್ವೋತ್ತಮ ಜ್ಞಾನವನ್ನು ನೀಡಿದರು. ಭೀಮಸೇನದೇವರು ಎಂದೂ ಶ್ರೀಹರಿಯನ್ನು ಬಿಟ್ಟು ಬೇರೊಬ್ಬ ದೇವತೆಗೆ ಮಣಿದಿಲ್ಲ. ಶ್ರೀಹರಿಗೆ ವಿರುದ್ಧವಾಗಿ ಎಂದೂ ನಿಂತಿಲ್ಲ. ಭೀಮಸೇನದೇವರು ಎಂದೂ ನಿರಾಯುಧರ ಮೇಲೆ ಆಯುಧಧಾರಿಯಾಗಿ ಯುದ್ಧ ಮಾಡಿಲ್ಲ, ಎಂದೂ ಪಲಾಯನ ಮಾಡಿಲ್ಲ, ಕಪಟವಂಚನೆಗಳನ್ನೂ ನಡೆಸಿಲ್ಲ. ಭೀಮಸೇನದೇವರು ತಮ್ಮ ವಿದ್ಯೆಯನ್ನು ಎಂದೂ ತಮ್ಮ ಜೀವನೋಪಾಯಕ್ಕೆ ಉಪಯೋಗಿಸಿಲ್ಲ. ಆದ್ದರಿಂದಲೇ

ಅವರು ನಹುಷಮತ್ತು ಯಕ್ಷನ ಪ್ರಶ್ನೆಗಳಿಗೆ ಉತ್ತರ ಗೊತ್ತಿದ್ದರೂ ಉತ್ತರಿಸದೆ ಇದ್ದದ್ದು.

**ಭೀಮ – ಅಸ್ತ್ರಯುದ್ಧ** –

ಭೀಮಸೇನದೇವರು ಅಸ್ತ್ರಯುದ್ಧ ಮಾಡಿದ ಪ್ರಸಂಗಗಳು ಎರಡೇ. ಒಂದು ಕರ್ಣಪರ್ವದಲ್ಲಿ ಅಶ್ವತ್ಥಾಮರೊಂದಿಗೆ ಮತ್ತು ದ್ರೋಣಪರ್ವದ ಕೊನೆಯಲ್ಲಿ ಅಲಂಬುಸನೆಂಬ ರಾಕ್ಷಸನೊಂದಿಗೆ ಮಾತ್ರ. ಅದೂ ಕೂಡ ಶ್ರೀಹರಿಯ ಆದೇಶದಿಂದಲೇ ಹೊರತು, ಅನಿವಾರ್ಯತೆಯಿಂದಲ್ಲ. ಎರಡೂ ಸನ್ನಿವೇಶಗಳಲ್ಲಿ ಭೀಮನು ಆ ಅಸ್ತ್ರದೇವತೆಗಳನ್ನು ಆಜ್ಞೆ ಮಾಡಿ ಪ್ರಯೋಗಿಸಿದನೇ ಹೊರತು, ಅವರನ್ನು ಯಾಚಿಸಿ ಮಾಡಿಲ್ಲ. ಭೀಮಸೇನದೇವರಿಗೆ ಯಾವ ಯುದ್ಧದಲ್ಲೂ ಸೋಲೇ ಆಗಲಿಲ್ಲ.

**ಭೀಮಸೇನನ ಬದಲು ಧರ್ಮಜನೇ ಅಣ್ಣನಾಗಿದ್ದು ಏಕೆ?–**ಚಿಕ್ಕವರಾದವರು ಧರ್ಮ ಹೇಳುವುದು ಕರ್ತವ್ಯ. ಆದರೆ ತೀರ್ಮಾನ ದೊಡ್ಡವರದ್ದೇ. ಆದರೆ ತಾನೇ ದೊಡ್ಡವನಾದಾಗ ಹಾಗಲ್ಲ. ತೀರ್ಮಾನ ಧರ್ಮಕ್ಕನುಗುಣವಾಗಿಯೇ ಇರುವಂತೆ ನೋಡಿಕೊಳ್ಳಬೇಕಾಗುತ್ತದೆ. ಅಂದರೆ ಭೀಮನು ಸ್ವಧರ್ಮ ಹೇಳುವುದನ್ನು ಮಾತ್ರವಲ್ಲದೆ ಅನುಸರಿಸಿ ತೋರಿಸುತ್ತಿದ್ದನು. ಅರ್ಥಾತ್ ದುರ್ಯೋಧನಾದಿಗಳನ್ನು ಅಲ್ಲೇ ಸದೆ ಬಡೆಯುತ್ತಿ-ದ್ದನು. ಆಗ ಆ ದುಷ್ಟರು ಮಾಡುತ್ತಿದ್ದ ವಿಷಪ್ರಯೋಗಾದಿಗಳೇ

ಮುಂತಾದ ಕಾರ್ಯ ಪ್ರಕಟವಾಗುತ್ತಿರಲಿಲ್ಲ. ಆದ್ದರಿಂದ ಶ್ರೀಹರಿ ಭೀಮನನ್ನು ತಮ್ಮನಾಗಿ ಅವತಾರ ಮಾಡಲು ಹೇಳಿದ.

ದುರ್ಯೋಧನನ ಪ್ರೇರಣೆಯಿಂದ ಧೃತರಾಷ್ಟ್ರ ಧರ್ಮರಾಜನಿಗೆ ವಾರಣಾವತಕ್ಕೆ ಹೊರಡಲು ಆಜ್ಞೆ ಮಾಡಿದಾಗ, ಧರ್ಮಜನು ಸಮ್ಮತಿಸಲು ಭೀಮಸೇನನು ತನ್ನಣ್ಣನಿಗೆ ಹೇಳಿದನು "ನಾವು ಭಿಕ್ಷಾಟನೆ ಮಾಡಬೇಕಾಗುತ್ತದೆ, ಅದು ಕ್ಷತ್ರಿಯರಿಗೆ ಅಧರ್ಮ" ಎಂದು ಧರ್ಮಜನಿಗೇ ಧರ್ಮ ಸೂಕ್ಷ್ಮವನ್ನು ತಿಳಿಸಿದನು.

**ಅರಗಿನ ಮನೆಯಲ್ಲಿ ಕಾಯ್ದ ಭೀಮಸೇನ** – ಭೀಮಸೇನ ದೇವರು ಅರಗಿನ ಮನೆಯಲ್ಲಿ ಆರು ತಿಂಗಳ ಕಾಲ ಸ್ವಲ್ಪಹೊತ್ತೂ ನಿದ್ರಿಸದೆ, ತನ್ನ ಸಹೋದರರನ್ನೂ, ತನ್ನ ತಾಯಿಯನ್ನೂ ರಕ್ಷಿಸಿದ. ಪ್ರಳಯಕಾಲದಲ್ಲೇ ನಿದ್ರಿಸದಿರುವ ಮುಖ್ಯಪ್ರಾಣರ ವೈಶಿಷ್ಟ್ಯ ಇರುವಾಗ ಇದು ಅಂತಹ ವಿಶೇಷವೇನಲ್ಲ. ಪುರೋಚನನ ಸಹೋದರಿ ತನ್ನ ಐವರು ಮಕ್ಕಳೊಂದಿಗೆ ಧರ್ಮರಾಜಾದಿಗಳು ಇದ್ದ ಸ್ಥಳಕ್ಕೆ ಬಂದು ಭೀಮಾದಿಗಳನ್ನೆಲ್ಲ ಸಂಹರಿಸಲು ಹೊಂಚು ಹಾಕುತ್ತಿದ್ದಾಗ, ಭೀಮಸೇನ ದೇವರು ಆ ಅರಗಿನ ಮನೆಯ ಸಮೇತ ಆ ಆರೂ ಜನರನ್ನು ಸುಟ್ಟು ಹಾಕಿ, ತನ್ನವರನ್ನು ರಕ್ಷಿಸಿ ಸುರಂಗ ಮೂಲಕ ಎಲ್ಲರನ್ನೂ ಹೊತ್ತುಕೊಂಡು ಹೊರಟ.

**ಹಿಡಿಂಬಾವಿವಾಹ** – ಅಲ್ಲಿಂದ ಬಂದ ಪಾಂಡವರು ಹಿಡಿಂಬವನದಲ್ಲಿದ್ದಾಗ, ಹಿಡಿಂಬೆ ಎಂಬ ರಾಕ್ಷಸಿಯನ್ನು ವಿವಾಹವಾದನು. ಹಿಡಿಂಬೆಯು "ಶ್ರೀ" ಎಂಬ ಅಪ್ಸರೆಯಾಗಿದ್ದು,

ಇಂದ್ರನ ಉಪಪತ್ನಿಯರಲ್ಲಿ ಒಬ್ಬಳು. ಒಮ್ಮೆ ಶಚೀದೇವಿಯೊಂದಿಗೆ ಸ್ಪರ್ಧೆಗಿಳಿಯಲು ಅವಳಿಗೆ ರಾಕ್ಷಸಯೋನಿಯಲ್ಲಿ ಜನಿಸಲು ಶಾಪವನ್ನಿತ್ತಿದ್ದಳು ಶಚೀದೇವಿ. ಆದ್ದರಿಂದಲೇ ಇಲ್ಲಿ ಹಿಡಿಂಬೆಯಾಗಿ ಅವತಾರ ಮಾಡಿದ್ದಳು. ಅವಳ ಸಹೋದರ ಹಿಡಿಂಬ ಪಾಂಡವರನ್ನೇ ಭಕ್ಷಿಸಲು ಬರಲು, ಅವನನ್ನು ಸಂಹಾರ ಮಾಡಿದನು. ಹಿಡಿಂಬೆಯಲ್ಲಿ ಭಾರತೀದೇವಿಯು ಆವೇಶವಿದ್ದುದರಿಂದಲೇ, ಮತ್ತು ಅವಳ ಶಾಪ ವಿಮೋಚನಾರ್ಥ ಮತ್ತು ಭಗವಾನ್ ವೇದವ್ಯಾಸರ ಆದೇಶದಂತೆಯೇ, ಧರ್ಮರಾಜನಿಗಿಂತ ಮುಂಚೆಯೇ ಹಿಡಿಂಬೆಯುನ್ನು ವಿವಾಹವಾಗಿ ಅವಳಿಂದ ಘಟೋತ್ಕಚನೆಂಬ (ನಿಋತಿ ಎಂಬ ದೇವತೆ) ಮಗನನ್ನು ಭೀಮಸೇನನು ಪಡೆದನು.

**ಬ್ರಾಹ್ಮಣವೇಶದಿ ಭೀಮ** – ನಂತರ ಅಲ್ಲಿಂದ ಏಕಚಕ್ರ ನಗರಕ್ಕೆ ಆಗಮಿಸಿದರು. ಭೀಮಸೇನನು, ಅಲ್ಲಿ ಬ್ರಾಹ್ಮಣವೇಶದಿಂದ ಇದ್ದು, ಅಲ್ಲಿ ವೈಶ್ಯರಲ್ಲಿ ಭಿಕ್ಷಾಟಣೆ ಮಾಡುವಾಗಲೂ, "ಭಿಕ್ಷಾಂ ದೇಹಿ" ಎಂದು ಯಾಚಿಸಲಿಲ್ಲ, ಬದಲಿಗೆ "ಹುಂಕಾರ" ಮಾಡಿ ಭಿಕ್ಷೆ ಯಾಚಿಸುತ್ತಿದ್ದರು. ಉಳಿದವರು ಮೌನದಿಂದಲೇ ಭಿಕ್ಷೆ ಬೇಡುತ್ತಿದ್ದರು.

**"ಭಂಡೀ ಅನ್ನವ ಉಂಡಿತು ಕೂಸು"** – ಆ ಏಕಚಕ್ರನಗರದಲ್ಲಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ರೋದಿಸುತ್ತಿದ್ದ ಬ್ರಾಹ್ಮಣರನ್ನು ನೋಡಿ, ಅವರಿಂದ ಆ ಮನೆಯ ಒಬ್ಬನು, ಬಕಾಸುರನಿಗೆ (ಇವನು ರಾವಣನ ಸೋದರಮಾವ, ಮಾರೀಚನ ಅವತಾರ)

ಆಹಾರವಾಗಿ ಹೋಗಬೇಕಾಗಿದ್ದನು ತಿಳಿದು, ತಾವೇ ಒಂದು ಭಂಡೀ ಅನ್ನವ ತೆಗೆದುಕೊಂಡು ಬಕಾಸುರನ ಬಳಿ ಹೋಗಿ, ಅಲ್ಲಿ ಅವನಿಗೆ ತಂದಿದ್ದ ಇಡೀ ಭಂಡೀ ಅನ್ನವನ್ನು ತಾವೇ ತಿಂದು ಬಕಾಸುರನನ್ನು ಸಂಹಾರ ಮಾಡಿದರು. ಇದನ್ನೇ ದಾಸರು ಹೇಳಿದ್ದು "ಭಂಡೀ ಅನ್ನವ ಉಂಡಿತು ಕೂಸು, ಭಕನ ಪ್ರಾಣವ ಹಿಂಗಿತು ಕೂಸು". ಇದರಿಂದ ಇಡೀ ಊರೇ ಸಂತಸಗೊಂಡಿತು. ಬಕಾಸುರನನ್ನು ಸಂಹಾರ ಮಾಡುವಾಗ ಅವನ ಒಂದು ಪಾದವನ್ನು ತನ್ನ ಅಂಗಾಲಿನಿಂದ ಒತ್ತಿ ಹಿಡಿದು ಮತ್ತೊಂದು ಕಾಲನ್ನು ತನ್ನ ಎರಡೂ ಕೈಗಳಿಂದ ಹಿಡುದು ಸೀಳಿ ಹಾಕಿದನು.

**ದ್ರೌಪದಿಸ್ವಯಂವರ**– ಅಲ್ಲಿಂದ ಮುಂದೆ ಬ್ರಾಹ್ಮಣವೇಶದಿಂದ ದ್ರುಪದನ ರಾಜ್ಯಕ್ಕೆ ದ್ರೌಪದಿಯ ಸ್ವಯಂವರಕ್ಕೆ ಬಂದು ಅಲ್ಲಿ ಅರ್ಜುನನು, ಭೀಮಸೇನನ ಅಪ್ಪಣೆಯಂತೆ, ಕೃಷ್ಣನ ಆಜ್ಞೆಯಂತೆ ಮತ್ಸ್ಯಯಂತ್ರವನ್ನು ಭೇದಿಸಲು, ಅಲ್ಲಿದ್ದ ರಾಜರುಗಳೆಲ್ಲ ಇವರ ಮೇಲೆ ಯುದ್ಧಕ್ಕೆ ಬರಲು, ಭೀಮಸೇನನು ಒಂದು ಹತ್ತು ಯೋಜನ ವಿಸ್ತಾರವಾದ ವೃಕ್ಷವನ್ನು ಹುಲ್ಲುಕಡ್ಡಿಯಂತೆ ಅನಾಯಾಸವಾಗಿ ಕಿತ್ತು, ಎಲ್ಲ ರಾಜರುಗಳನ್ನೂ ದಿಕ್ಕೆಟ್ಟು ಓಡುವಂತೆ ಮಾಡಿದರು. ನಂತರದಲ್ಲಿ ಶಲ್ಯರಾಜ ಯುದ್ಧಕ್ಕೆ ಬರಲು, ಭೀಮಸೇನನು ಅವನ ಎರಡೂ ಕೈಗಳಿಂದ ಹಿಡಿದು ಗಗನಕ್ಕೆ ತೂರಿದನು. ಕೆಳಕ್ಕೆ ಬೀಳುವ ಮುನ್ನ ಬಂಧುವೆಂಬ ಕಾರಣದಿಂದ ಪುನ: ಅವನನ್ನು ಹಿಡಿದು ಮೆಲ್ಲಗೆ ನೆಲದ ಮೇಲೆ ಕುಳ್ಳಿರಿಸಿದನು. ನಂತರದಲ್ಲಿ ಭೂರಿಶ್ರವಸ್ ಮತ್ತು ಕರ್ಣ ಇಬ್ಬರು ಸೇರಿ ಅರ್ಜುನನನ್ನು ವಿರಥನಾಗಿ ಮಾಡಿದಾಗ, ಭೀಮಸೇನ

ದೇವರು ಬಂದು ಒಂದು ದೊಡ್ಡ ವೃಕ್ಷವನ್ನು ಕೈಗೆತ್ತಿಕೊಂಡಾಗ, ದುರ್ಯೋಧನ, ಭೂರಿಶ್ರವಸ್, ಶಕುನಿ, ಭೂರಿ, ಜಯದ್ರಥ ಅವರೆಲ್ಲ ಪಲಾಯನಗೈದರು. ದ್ರುಪದರಾಜನನ್ನು ಆಕ್ರಮಣಮಾಡಿದವರನ್ನೆಲ್ಲ ಸದೆಬಡಿದು ಅಥವಾ ಓಡಿಸಿ ದ್ರುಪದರಾಜನನ್ನು ರಕ್ಷಿಸಿದನು

**ದುರ್ಯೋಧನನಿಗೆ ಸಹಾಯಹಸ್ತ ಭೀಮನಿಂದ** – ನಂತರದಲ್ಲಿ ಸುವಜ್ರನೆಂಬ ರುದ್ರವರದಿಂದ ಕೂಡಿದ ದೈತ್ಯ, ಜರಾಸಂಧನ ಜೊತೆಗೂಡಿ ದುರ್ಯೋಧನನ್ನು ಗೆದ್ದು ಸೆರೆಹಿಡಿದಾಗ, ಕರ್ಣ ಪಲಾಯನ ಮಾಡಿದ. ಆಗ ಭೀಮಸೇನದೇವರು, ಧರ್ಮಜನ ಮಾತಿನಂತೆ ಜರಾಸಂಧಾದಿಗಳನ್ನು ಸೋಲಿಸಿ ಸುವಜ್ರನನ್ನು ಸಂಹರಿಸಿ, ಕೌರವರನ್ನು ಸೆರೆಯಿಂದ ಬಿಡುಗಡೆ ಮಾಡಿದನು.

**ಯುವರಾಜ್ಯಾಭಿಷೇಕ ಭೀಮಸೇನನಿಗೆ** – ಧೃತರಾಷ್ಟ್ರನು ಸಮ್ಮತಿಸಿ ನೀಡಿದ ಇಂದ್ರಪ್ರಸ್ಥದಲ್ಲಿ ತೆರಳಿದ ಪಾಂಡವರಿಗೆ ವ್ಯಾಸರಿಂದ ಪಟ್ಟಾಭಿಷೇಕವಾಗಲು, ಭೀಮಸೇನನು ಯುವರಾಜನಾಗಿ, ಧರ್ಮರಾಜ್ಯವನ್ನು ಸ್ಥಾಪಿಸಲು, ವಿಷ್ಣುಸರ್ವೋತ್ತಮತ್ವ ಪ್ರತಿಪಾದನೆ, ಆಗುತ್ತಿತ್ತು.

**ಭೀಮಶಾಸನ** – ಭೀಮಸೇನನು ಯುವರಾಜ್ಯದಲ್ಲಿ ಅಭಿಷಿಕ್ತನಾಗಲು, ರಾಜ್ಯದಲ್ಲೆಲ್ಲ ವೈಷ್ಣವಧರ್ಮವೇ ಇತ್ತು. ರಾಜ್ಯಕ್ಕೆ ಜರಾಸಂಧ ಅಥವಾ ಕೀಚಕಾದಿಗಳಿಂದ ಯಾವುದೇ

ಆಕ್ರಮಣವಾಗುತ್ತಿರಲಿಲ್ಲ. ಭೀಮನಿಗೆ ಆಳ್ವಿಕೆಯಲ್ಲಿ ದೃಷ್ಟದ್ಯುಮ್ನನು ಸಹಕರಿಸುತ್ತಿದ್ದನು, ಪಾಂಡವರಾಜ್ಯದಲ್ಲಿ – ಒಬ್ಬನೇ ಒಬ್ಬ ವಿಷ್ಣುದ್ವೇಷಿಯಿರಲಿಲ್ಲ, ಬಡವರಿರಲಿಲ್ಲ, ಧರ್ಮಚ್ಯುತಿಯಿರಲಿಲ್ಲ, ಕಾಯಿಲೆಗಳಿರಲಿಲ್ಲ, ಅಸಹಜ ಸಾವಿರಲಿಲ್ಲ, ಜನರು ಅವರವರ ವರ್ಣಾಶ್ರಮ ಧರ್ಮಗಳನ್ನು ಚಾಚೂ ತಪ್ಪದೆ ಆಚರಿಸುತ್ತಿದ್ದರು, ಕೃತಯುಗ ಧರ್ಮಾಚರಣೆಯಿತ್ತು.

**ಕಾಳೀ ವಿವಾಹ** – ನಂತರ ಕಾಶೀರಾಜನ ಪುತ್ರಿಯಾದ ದ್ರೌಪದಿಯ ಮತ್ತೊಂದು ರೂಪವಾದ ಕಾಳೀ ಸ್ವಯಂವರದಲ್ಲಿ, ಭೀಮಸೇನ ದೇವರು ವೇದಗಳು ನಿರ್ದೋಷಿ ಎಂದು ಸಾಧಿಸಿ, ವೇದವಾಕ್ಯಗಳಿಂದಲೂ ಇತರ ಸದಾಗಮಗಳಿಂದಲೂ ಎಲ್ಲರನ್ನೂ ಜಯಿಸಿ, ಕಾಳಿಯನ್ನು ವಿವಾಹವಾದನು ಭೀಮಸೇನ.

**ಗಂಗೆಯ ದಮನ** - ಒಮ್ಮೆ ಹಸ್ತಿನಾಪುರದ ಬಳಿ ಗಂಗಾತೀರದಲ್ಲಿ ವಿಷ್ಣು ಪೂಜೆಗೆ ಕುಳಿತಿದ್ದಾಗ ಪೂಜೆಗೆ ವಿಘ್ನ ಮಾಡಲೆಂದು ಗಂಗೆ ಉಕ್ಕೇರಿದಾಗ, ಭೀಮ ಅದನ್ನು ದೂರ ತಳ್ಳಿದ. ಆಗ ಗಂಗೆ ತನ್ನ ದಿಕ್ಕನ್ನೇ ಬದಲಿಸಿ ಬೇರೊಂದು ದಿಕ್ಕಿಗೆ ಹರಿಯಿತು.

**ಭೀಮನಿಂದ ೩ ಬಾರಿ ಶಿವನ ಸೋಲು** –

ಅ)ವ್ಯಾಘ್ರೇಶ್ವರಲಿಂಗ – ಒಮ್ಮೆ ಶಿವ ಹುಲಿರೂಪದಲ್ಲಿ ಭೀಮನನ್ನು ಪರೀಕ್ಷಿಸಲು ಕಪಿಲಾ ಗೋ ರೂಪದಲ್ಲಿದ್ದ

ಪಾರ್ವತಿಯನ್ನು ಕೊಲ್ಲಲೋ ಎಂಬಂತೆ ಧಾವಿಸಲು, ಭೀಮನ ಗದಾಪ್ರಹಾರದಿಂದ ಸೋತ ಶಿವ ಲಿಂಗದೊಳಗೆ ಸೇರಿಕೊಂಡ. ಅದೇ ವ್ಯಾಘ್ರೇಶ್ವರಲಿಂಗ ಎಂದು ಪ್ರಸಿದ್ದವಾಯಿತು.

**ಆ)ಶಾರ್ದೂಲಲಿಂಗ** – ಮತ್ತೊಮ್ಮೆ ಇದೇರೀತಿ ಶಿವ ಹಿಮವತ್ಪರ್ವತದಲ್ಲಿ ಗೋಮತೀ ನದೀ ತೀರದಲ್ಲಿ ಯುದ್ಧ ನಡೆದಾಗ, ಭೀಮನಿಂದ ಸೋತ ಶಿವ ಮತ್ತೊಮ್ಮೆ ಲಿಂಗವನ್ನು ಸೇರಿ ಅದು ಶಾರ್ದೂಲಲಿಂಗವೆಂದು ಪ್ರಸಿದ್ಧಿಯಾಯಿತು.

**ಇ)ಕೇದಾರಲಿಂಗ** – ಮತ್ತೊಮ್ಮೆ ಕೇದಾರದಲ್ಲಿ ಬ್ರಾಹ್ಮಣರೂಪದ ಶಿವ ಪರಾಭವಗೊಂಡು ಭಯಭೀತನಾಗಿ ಲಿಂಗದೊಳಗೆ ಸೇರಿಕೊಂಡು, ಕೇದಾರಲಿಂಗವಾಗಿ, ಆ ಕ್ಷೇತ್ರ ವೈಷ್ಣವರಿಗೆ ನಿಷಿದ್ಧವೆಂದು ಶಾಪವಿತ್ತನು. ಆದ್ದರಿಂದಲೇ ವೈಷ್ಣವರು ಕೇದಾರ ಕ್ಷೇತ್ರಕ್ಕೆ ಹೋಗುವುದಿಲ್ಲ. ಹೀಗೆ ಮೂರು ಬಾರಿ ಶಿವನು ಭೀಮಸೇನದೇವರಿಂದ ಪರಾಭವಗೊಂಡಿದ್ದಾನೆ.

ನಂತರದಲ್ಲಿ ಭೀಮಸೇನನು ಒಮ್ಮೆ ಯುದ್ಧಕ್ಕೆ ಬಂದಿದ್ದ ಜರಾಸಂಧನನ್ನು ಗದೆಯಿಂದ ಹೊಡೆದು ಬೀಳಿಸಿ, ಗಂಗಾನದಿಯಲ್ಲಿ ಬಿಸಾಡಿದ. ನಾಚಿದ ಮಗಧದೇಶಾಧಿಪತಿ ಓಡಿಹೋದ.

ಭೀಮಸೇನನಿಗೆ ದ್ರೌಪದಿಯಿಂದ ಶ್ರುತಸೋಮನ ಜನನವಾಯಿತು.

**ಜರಾಸಂಧನ ವಧೆ** – ಶ್ರೀಕೃಷ್ಣನಿಂದ ಭೀಮಸೇನನಿಗೆ ಜರಾಸಂಧನ ಸಂಹಾರಕ್ಕೆ ಆಜ್ಞೆ. ಆ ಕಾಲದಲ್ಲಿ ಸಮಸ್ತ ಸಜ್ಜನರಿಗೆ ಸಾಧನೆಗೆ ವಿಘ್ನಕರವಾಗಿದ್ದವರು ಒಬ್ಬ ದುರ್ಯೋಧನನಾದರೆ ಇನ್ನೊಬ್ಬ ಜರಾಸಂಧ. ಜರಾಸಂಧನು ಶಿವನಿಂದ ರಕ್ಷಿತನಾಗಿದ್ದನೂ, ಮತ್ತು ಆಗಿನ ಕಾಲದಲ್ಲೇ ಶಿವಸರ್ವೋತ್ತಮ ಪ್ರತಿಪಾದಕನಾಗಿದ್ದನು. ಭೀಮಾರ್ಜುನರು ಶ್ರೀಕೃಷ್ಣನೊಂದಿಗೆ, ಬ್ರಾಹ್ಮಣರ ವೇಶದಲ್ಲಿ, ಜರಾಸಂಧನ ಪಟ್ಟಣಕ್ಕೆ ಪ್ರವೇಶಿಸಿ, ಅಲ್ಲಿದ್ದ ಮೂರು ಭೇರಿಗಳನ್ನು, ಜರಾಸಂಧನಿಂದ ನಿತ್ಯಪೂಜಿತವಾಗಿದ್ದ ಬೆಟ್ಟದಲಿಂಗವನ್ನು ಭೀಮಸೇನದೇವರು ಮುಷ್ಟಿಪ್ರಹಾರದಿಂದ ಪುಡಿಮಾಡಿದರು. ನಂತರ ಜರಾಸಂಧನೊಂದಿಗೆ ವಾಗ್ವಾದ ಆರಂಭವಾಯಿತು.

**ಜರಾಸಂಧನೊಂದಿಗೆ ವಾಗ್ವಾದ** –

ಜರಾಸಂಧ – ನೀವು ಯಾರು? ನನ್ನ ಬೆಟ್ಟದ ಲಿಂಗವನ್ನು ಏಕೆ ಪುಡಿಗೈದಿರಿ?

ಕೃಷ್ಣ – – ಶತ್ರುವಿಗೆ ಎಲ್ಲ ಬಗೆಯ ವಿರೋಧ ಮಾಡಲೇ ಬೇಕಾದ್ದರಿಂದ ಪುಡಿಮಾಡಿದೆವು.

ಜರಾಸಂಧ – ನಾನು ಬ್ರಾಹ್ಮಣವೈರಿಯಲ್ಲ. ನಿಮಗೆ ನನ್ನಲ್ಲಿ ಏಕೆ ವೈರ?

ಕೃಷ್ಣ – ನಾವು ಅಂತಹ ಬ್ರಾಹ್ಮಣರಲ್ಲ, ನಿನ್ನ ವೈರಿಯಾದ ಕೃಷ್ಣನೇ ನಾನು, ಇವರಿಬ್ಬರೂ ಭೀಮಾರ್ಜುನರು. ವೇದದ ಹಾದಿಯನ್ನು ಬಿಟ್ಟು ರಾಕ್ಷಸ ಧರ್ಮದಿಂದ ಬಲಿಪಶುವಾಗಿ ಮಾಡಲು ನೀನು ಬಯಸಿರುವಿ. ಆದ್ದರಿಂದ ನಿನ್ನನ್ನು

ಬಲಾತ್ಕಾರದಿಂದ ಶಾಸನ ಮಾಡಲು ನಾವು ಬಂದಿರುವೆವು. ನೀನು ಕೂಡಲೇ ಆ ಪಶುಗಳನ್ನು ಬಿಡುಗಡೆ ಮಾಡು.

ಜರಾಸಂಧ – ಸಾಧ್ಯವಿಲ್ಲ. ನಾನು ಶಿವಯಾಗಕ್ಕೆಂದು ತೊಡಗಿರಿಸಿರುವ ಈ ಪಶುಗಳನ್ನು ಬಿಡಲಾರೆ. ಬೇಕಾದರೆ ಹೋರಾಡುವೆ. ನಿಮ್ಮೆಲ್ಲರನ್ನೂ ಯುದ್ಧದಲ್ಲಿ ಎದುರಿಸುವೆನು.

ಕೃಷ್ಣ – ನಿನಗೆ ನಮ್ಮ ಮೂರು ಮಂದಿಯರಲ್ಲಿ ಯಾರನ್ನು ಬೇಕಾದರೂ ಆರಿಸಿಕೋ ಯುದ್ಧಕ್ಕೆ.

ಜರಾಸಂಧ – ನಾನು ಬಲಹೀನನಾದ ಅರ್ಜುನನೊಂದಿಗೆ ಯುದ್ಧಮಾಡಲಾರೆ. ಇವನು ಕೇವಲ ಬಾಲಕ. (ಆಗ ಭೀಮನಿಗೆ 56 ವರ್ಷ. ಆಗ ಅರ್ಜುನನಿಗೆ 55ವರ್ಷ, ಕೃಷ್ಣನಿಗೆ 55 ವರ್ಷ )

ಕೃಷ್ಣ – ಹಾಗಾದರೆ ನನ್ನೊಂದಿಗೆ ಯುದ್ಧಕ್ಕೆ ಬಾ

ಜರಾಸಂಧ– ಗೋಪಾಲಕನೊಂದಿಗೆ ನಾನು ಯುದ್ಧ ಮಾಡುವುದಿಲ್ಲ (ಅವನು ಆಗಾಗಲೇ 18 ಬಾರಿ ಕೃಷ್ಣ ನೊಂದಿಗೆ ಸೋತಿದ್ದ). ನನಗೆ ಭೀಮನೇ ಸರಿ. ಭೀಮಸೇನನಿಗೆ ಒಂದು ಗದೆಯನ್ನು ಜರಾಸಂಧನೇ ನೀಡಿದ. ಬಲಿಷ್ಠನಾದ ಜರಾಸಂಧ ಮಲ್ಲಯುದ್ಧಕ್ಕೆ ಅಂಜಿ ಗದಾಯುದ್ಧಕ್ಕೆ ಪ್ರವಕ್ತನಾದ. ಅವರಿಬ್ಬರೂ ಶ್ರೀ ಕೃಷ್ಣಾರ್ಜುನರ ಮುಂದೆ ಯುದ್ಧಕ್ಕೆ ತೊಡಗಿದರು. ಮೊದಲು ವಾಗ್ಯುದ್ಧದಲ್ಲಿ ಜರಾಸಂಧನ ಪರಾಜಯುವಾಯಿತು. ಜರಾಸಂಧನ ಶಿವಸರ್ವೋತ್ತಮ ಪ್ರತಿಪಾದನೆ ಭೀಮಸೇನನಿಂದ ಹರಿಸರ್ವೋತ್ತಮತ್ವ ಪ್ರತಿಪಾದನೆ ವಾಗ್ಯುದ್ಧದಲ್ಲಿ ಸೋತ ಜರಾಸಂಧ ಗದಾಯುದ್ಧಕ್ಕೆ ಅಣಿಯಾದನು. ನಂತರ ಗದಾಯುದ್ಧದಲ್ಲಿ ಗದೆಗಳು ಪುಡಿಪುಡಿಯಾದವು. ಬ್ರಹ್ಮಾಂಡಸ್ಫೋಟವಾಗುವಂತ ಶೈಲಿಯಲ್ಲಿ ಮುಷ್ಟಿಪ್ರಹಾರಗಳಿಂದ

ಹೋರಾಡಿದರು. ಭೂಮಿಯು ಕಂಪಿಸಿತು, ಬೆಟ್ಟಗಳು ಪುಡಿಪುಡಿಯಾದವು. ಪರ್ವತಗಳು ನಡುಗಿ, ಸಾಗರಗಳು ಅಲ್ಲೋಲಕಲ್ಲೋಲಗೊಂಡವು. ಬ್ರಹ್ಮ-ರುದ್ರಾದಿಗಳು, ಸುರರು, ಗಗನದಲ್ಲಿ ನಿಂತು ಭೀಮಸೇನದೇವರಿಂದ ಹರಿಸರ್ವೋತ್ತಮ ಪ್ರತಿಪಾದನೆಯನ್ನು ನೇರವಾಗಿ ವೀಕ್ಷಿಸಿದರು. ಒಟ್ಟು ಹದಿನೈದು ದಿನಗಳ ಕಾಲ ನಡೆದ ಯುದ್ಧದಲ್ಲಿ ನಂತರ ಭೀಮಸೇನನು ಜರಾಸಂಧನನ್ನು, ಮೊದಲು ಅವನ ಸೊಂಟ ಮುರಿದು, ನಂತರ ದೇಹ ಮುರಿದು, ಸೀಳಿ ಸಂಹಾರಮಾಡಿ, ಶ್ರೀ ಕೃಷ್ಣನಿಗೆ ಜರಾಸಂಧನ ವಧಾವನ್ನು ಸಮರ್ಪಿಸಿದನು.

## ರಾಜಸೂಯಯಾಗ – ಭೀಮಸೇನನಿಂದ ದಿಗ್ವಿಜಯ –

ಅ) ಭೀಮಸೇನನು ರಾಜರುಗಳನ್ನು ಪರಾಭವಗೊಳಿಸಿದ. ಬಳಿಕ ವಿರಾಟರಾಜನ ಬಳಿಗೆ ತೆರಳಿ, ಅಲ್ಲಿ ಕೀಚಕನನ್ನು ಯುದ್ಧದಲ್ಲಿ ಸೋಲಿಸಿ ಅವನಿಂದಲೂ ಕಪ್ಪವನ್ನು ಪಡೆದುಕೊಂಡ.

ಆ) ಅನಂತರ ಚೇದಿ ದೇಶಕ್ಕೆ ಹೋದಾಗ, ಶಿಶುಪಾಲ ಯುದ್ಧ ಮಾಡದೇ ಕಪ್ಪವನ್ನು ನೀಡಿದ ಭೀಮಸೇನನ ಮೇಲಿನ ಅಂಜಿಕೆಯಿಂದ.

ಇ) ನಂತರದಲ್ಲಿ ಪೌಂಡ್ರಕ ವಾಸುದೇವನನ್ನು ಮತ್ತು ಕರ್ಣನನ್ನು ವಿರಥನನ್ನಾಗಿಸಿ ಎಲ್ಲರಿಂದಲೂ ಕಪ್ಪವನ್ನು ತೆಗೆದುಕೊಂಡು ಬಂದನು.

ಈ) ಗರುಡ – ಶೇಷರು ಸಹ ಕ್ರೀಡೆಗಾಗಿ ಯುದ್ಧಮಾಡಿದಾಗ ಅವರನ್ನೂ ಸೋಲಿಸಿ ಭೀಮಸೇನ ಅವರು ಒಪ್ಪಿಸಿದ ಭೂಷಣಾದಿ ಗಳನ್ನು ಸಂತೋಷದಿಂದ ಸ್ವೀಕರಿಸಿದ.

ಉ) ಬಲಿಷ್ಠನಾದ ಭೀಮನು ಸಮುದ್ರದಲ್ಲಿ ಈಜುತ್ತಾ ಬಾಣಾಸುರನ ಪಟ್ಟಣಕ್ಕೆ ತೆರಳಿ ಅಲ್ಲಿ ಆನೆಯ ರೂಪದಲ್ಲಿ ಕ್ರೀಡೆಗೆಂದು ಬಂದ ಶಿವನನ್ನು ಸೋಲಿಸಿದ.

ಊ) ಶಿವನಿಂದ ರಕ್ಷಿತನಾಗಿದ್ದ ಬಲಿಯ ಮಗ ಬಾಣಾಸುರನನ್ನೂ ಸೋಲಿಸಿ, ಅವನಿಂದ ಕಪ್ಪವಾಗಿ ರತ್ನಗಳ ರಾಶಿಯನ್ನೇ ಪಡೆದ.

ಋ) ಭೀಮಸೇನ ತಾನು ಎಲ್ಲ ಕಡೆ ಸಂಪಾದಿಸಿದ ಅಪಾರ ಸಂಪತ್ತನ್ನೂ ಪರಮಾತ್ಮನ ಎರಡೂ ರೂಪಗಳಾದ ಶ್ರೀವೇದವ್ಯಾಸ ಮತ್ತು ಶ್ರೀ ಕೃಷ್ಣನಿಗೆ ನಮಿಸಿ ಸಮರ್ಪಿಸಿದನು.

ೠ) ಹೀಗೆ ಭೀಮಾದಿಗಳು ಸಂಪಾದಿಸಿದ ಚಿನ್ನ, ರತ್ನಗಳ ಸಂಪತ್ತು ನಾಲ್ಕು ಬೆಟ್ಟಗಳಷ್ಟಾಯಿತು. ನಕುಲ ತಂದದ್ದು ಹತ್ತು ಯೋಜನ, ಸಹದೇವನದ್ದು ಮೂವತ್ತು ಯೋಜನ, ಭೀಮಸೇನನದ್ದು ನೂರು ಯೋಜನ, ಮತ್ತು ಅರ್ಜುನನದ್ದು ನಾನ್ನೂರು ಯೋಜನಗಳಷ್ಟು ಆ ಬೆಟ್ಟಗಳು ವಿಸ್ತಾರವಾಗಿದ್ದವು. ಇಲ್ಲಿ ಮೇಲ್ನೋಟಕ್ಕೆ ಅರ್ಜುನನದ್ದು ಭೀಮನಿಗಿಂತ ಜಾಸ್ತಿಯಾಗಿ ಕಂಡು ಬಂದರೂ ಅವರ ದಿಗ್ವಿಜಯದ ವ್ಯಾಪ್ತಿಯನ್ನು ಗಮನಿಸಿದಾಗ ಒಟ್ಟು ಲೆಕ್ಕದಲ್ಲಿ ಅವನಿಗಿಂತ ಅಧಿಕ ಪ್ರಮಾಣದ್ದು ಎಂದು ತಿಳಿಯಬೇಕು.

ಎ) ರಾಜಸೂಯಯಾಗದಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆ ಸಲ್ಲಿಸಲು ತೀರ್ಮಾನವಾದಾಗ ಚೇದಿರಾಜ ಶಿಶುಪಾಲ ಕೋಪದಿಂದ ನಿಂದಿಸತೊಡಗಿದ. ಪರಮಾತ್ಮನನ್ನು ನಿಂದಿಸಿದುದನ್ನು ಕಂಡು ಕೋಪಗೊಂಡ ಭೀಮಸೇನನನ್ನು ಗಂಗಾಪುತ್ರ ಭೀಷ್ಮನು, "ಶ್ರೀಹರಿ ತಾನೇ ಕೊಲ್ಲುವುದಾಗಿ ವಚನ ನೀಡಿರುವುದನ್ನು ಹೇಳಿ"

ತಡೆದನು. ಇಲ್ಲಿ ಭೀಮನಿಗೆ ಪರಮಾತ್ಮನ ವಚನ ಗೊತ್ತಿಲ್ಲವೆಂದಲ್ಲ, ತನ್ನ ಕರ್ತವ್ಯವನ್ನು ಪ್ರಕಟಮಾಡಿದನಷ್ಟೆ.

**ಕೌರವರ–ಪಾಂಡವರ ಜೂಜು**– ಧೃತರಾಷ್ಟ್ರ ಪಾಂಡವರನ್ನು ದುರ್ಯೋಧನನ ಅಣತಿಯಂತೆ ದ್ಯೂತಕ್ಕೆ ಕರೆದಾಗ, ವಿದುರನು ಧರ್ಮಜನಿಗೆ ಬೇಡವೆಂದು ಹೇಳುತ್ತಾನೆ, ಭೀಮನು ತಡೆಯುತ್ತಾನೆ. ಆದರೆ ಧರ್ಮರಾಜ ಕೇಳುವುದಿಲ್ಲ. ಪಾಂಡವರು ರಾಜಸೂಯಯಾಗಕ್ಕಾಗಿ ಸಭೆಯನ್ನು ನಿರ್ಮಿಸಿದರೆ, ಕೌರವರು ದ್ಯೂತಕ್ಕಾಗಿ ಸಭೆಯನ್ನು ನಿರ್ಮಿಸಿದ್ದರು. ಜೂಜಿನಲ್ಲಿ ಶಕುನಿಯ ಕುತಂತ್ರದಿಂದಾಗಿ ಧರ್ಮರಾಜ ಪರಾಭವಗೊಂಡನು. ಧರ್ಮರಾಜ ಮೊದಲಿಗೆ ನಕುಲನನ್ನೂ, ನಂತರ ಕ್ರಮವಾಗಿ ಸಹದೇವನನ್ನೂ, ಅರ್ಜುನನ್ನೂ, ಭೀಮಸೇನನನ್ನೂ, ಮುಂದೆ ದ್ರೌಪದಿಯನ್ನು, ಬಳಿಕ ತನ್ನನ್ನೇ ಪಣವಿಟ್ಟು ಸೋತನು. ದುರ್ಯೋಧನ ದುಶ್ಶ್ಯಾಸನನನ್ನು ಕರೆಸಿ ದ್ರೌಪದಿಯನ್ನು ಕರೆತರಲು ಹೇಳಿದನು. ದುಶ್ಶ್ಯಾಸನ ದ್ರೌಪದಿಯ ಕೇಶವನ್ನು ಹಿಡಿದು ಎಳೆದು ಸಭೆಗೆ ತಂದನು. ಆದರೆ ಭೀಷ್ಮ, ದ್ರೋಣಾದಿಗಳು ತಮ್ಮ ಪ್ರತಿಭಟನೆಯನ್ನು ತೋರಲಾಗಲಿಲ್ಲ. ಭೀಮಸೇನನು ಧರ್ಮರಾಜನು ಸುಮ್ಮನಿರುವುದನ್ನು ಗಮನಿಸಿ ಹೇಳಿದನು "ದ್ರೌಪದಿಯನ್ನು ದ್ಯೂತದಲ್ಲಿ ಪಣಕ್ಕಿಟ್ಟ ನಿನ್ನ ಕೈಗಳನ್ನು ಸುಟ್ಟು ಹಾಕಬೇಕು, ಆದರೆ ಅದರಂತೆ ಮಾಡಬಾರದು, ಆದ್ದರಿಂದ ನಾನದನ್ನು ಮಾಡುತ್ತಿಲ್ಲ. ಉತ್ತಮರ ಬಗ್ಗೆ ಮಾತಿನಿಂದಲೇ ಶಿಕ್ಷೆ. ಮಧ್ಯಮರಿಗೆ ಧನದ ದಂಡ. ಅಧಮರಿಗೆ ದೇಹ ದಂಡನೆ. ಆದ್ದರಿಂದ ಮಾತಿನಿಂದಲೇ ಧರ್ಮರಾಜನಿಗೆ ದಂಡವನ್ನು

ಹೇಳಿದೆನಷ್ಟೆ" ಎಂದನು. ಭೀಮಸೇನ ಹೇಳುತ್ತಾನೆ " ನನ್ನ ಬಲದ ಬಗ್ಗೆ ನಿಮಗೆ ಸಂಶಯವಿದ್ದಲ್ಲಿ ವೀರರಾದ ನೀವೆಲ್ಲ ಈಗಲೇ ಎದ್ದುಬನ್ನಿ, ನಿಮ್ಮನ್ನೆಲ್ಲ ನಿಮ್ಮ ಪರಿವಾರ ಸಮೇತ ನನ್ನ ಅಂಗಾಲಿನಿಂದಲೇ ಹೊಸಕಿ ಹಾಕುವೆ. ನನ್ನನ್ನು ಯಾರು ಎದುರಿಸುವರು? ಹೀಗೆಂದು ಸಿಂಹನಾದ ಮಾಡಿದಾಗ ಇಡೀ ಸಭೆ ಗಡಗಡನೆ ನಡುಗಿತು.

**ಭೀಮಸೇನನ ಊರುಭಂಗ ಪ್ರತಿಜ್ಞೆ**- ಪಾಪಿಯಾದ ದುರ್ಯೋಧನ ಭೀಮಸೇನ ನೋಡುತ್ತಿರುವಂತೆಯೇ ದ್ರೌಪದಿಗೆ ತನ್ನ ತೊಡೆಯನ್ನು ತೋರಿಸಿದ. ಆಗ ಭೀಮಸೇನನು ನಿನ್ನ ಈ ತೊಡೆಯನ್ನು ಮಹಾವೇಗದ ಗದೆಯಿಂದ ಪುಡಿಮಾಡುವೆ" ಎಂದನು. ನಂತರ ದುರ್ಯೋಧನ ಹೇಳಿದ "ನಿಮಗೆ ಬೇರಾವ ಸಂಪತ್ತೂ ಇಲ್ಲ, ದ್ಯೂತದಲ್ಲಿ ಪಣವನ್ನಾಗಿ ಕೃಷ್ಣನನ್ನೇ ಇರಿಸಿರಿ" ಎಂದಾಗ, ಭೀಮಸೇನನು "ನಿನ್ನನ್ನು ನೆಲದ ಮೇಲೆ ಕೆಡವಿ ಚೆನ್ನಾಗಿ ತಲೆಯನ್ನು ತುಳಿಯುವೆ" ಎಂದು ಶಪಥಗೈದನು.

**ದುಶ್ಯಾಸನನ ವಧೆಗೆ ಭೀಮನ ಭಯಂಕರ ಪ್ರತಿಜ್ಞೆ** - ದುಶ್ಯಾಸನ ದ್ರೌಪದಾದೇವಿಯರ ವಸ್ತ್ರಾಪಹರಣಕ್ಕೆ ಪ್ರಯತ್ನ ಮಾಡಿದಾಗ, ಶ್ರೀಕೃಷ್ಣನೇ ಬಂದು ಅಕ್ಷಯವಸ್ತ್ರಪ್ರಧಾನ ಮಾಡಿ ಸಂರಕ್ಷಿಸಿದನು. ಆಗ ಭೀಮಸೇನನು "ಪಾಪಿಗಳಲ್ಲಿ ಮೊದಲಿಗನೂ, ಮಹಾ ಧರ್ಮಶೀಲರಾದ ಕುರುವಂಶದಲ್ಲಿ

ಜನಿಸಿದ ನೀಚನೂ ಆದ ಈ ದುಶ್ಯಾಸನನ ಎದೆಯನ್ನು ಬಗೆದು ರಕ್ತವನ್ನು ಕುಡಿಯುವೆ" ಎಂದು ಪ್ರತಿಜ್ಞೆಗೈದನು.

**ದ್ರೌಪದಿ- ಭೀಮಪ್ರತಿಜ್ಞೆ** – ದ್ರೌಪದಿಯು ಪ್ರತಿಜ್ಞೆ ಮಾಡಿದಳು "ಭೀಮನು ದುರ್ಯೋಧನನನ್ನೂ, ಕರ್ಣನನ್ನು ಅರ್ಜುನನೂ, ಶಕುನಿಯನ್ನು ಸಹದೇವನು ಕೊಲ್ಲುವನು". ಆಗ ಭೀಮನು "ಹಾಗೇ ಆಗುವುದು" ಎಂದನು

**ಭೀಮನ ಧರ್ಮಸಂದೇಶ** – ದುಶ್ಯಾಸನ ದ್ರೌಪದಿಯನ್ನು ಮನೆಯೊಳಗೆ ಸೆಳೆದೊಯ್ಯತೊಡಗಿದ. ಆಗ ಭೀಮನು "ಅರ್ಜುನ। ಇನ್ನು ಕ್ಷಮೆ ಒಪ್ಪುವಂತಹುದಲ್ಲ. ಅಳಿದ ಮೇಲೆ ಕಟ್ಟಿಗೆ, ಮಲದಂತೆ ಆಗುವ ಈ ದೇಹಕ್ಕೆ ಉಳಿಯುವ ಫಲಗಳು ಮೂರು – ವಿದ್ಯೆ, ಕರ್ಮ ಮತ್ತು ಸಂತಾನ. ಪತ್ನಿ ದೂಷಿತಳಾದಲ್ಲಿ ಸತ್ಸಂತತಿ ಇಲ್ಲದಂತಾಗುವುದು. ಪತ್ನಿ ಕೆಟ್ಟಾಗ ಅವನ ಅರ್ಧ ದೇಹ ಕೆಟ್ಟಂತಾಗುವುದರಿಂದ ಅವನಿಗೆ ಪುಣ್ಯ ಲೋಕಗಳು ಲಭಿಸವು, ರಕ್ಷಣೆ ನೀಡದೆ ಪತ್ನಿ ಕೆಟ್ಟರೆ ಅವಳನ್ನು ತೊರೆಯುವುದರಿಂದಲೂ ಕಲ್ಯಾಣವಾಗದು" ಆಗ ಭೀಮನು ನಾನೀಗಲೇ ಎಲ್ಲ ಕೌರವರನ್ನೂ ಕೊಲ್ಲುವೆನು ಎಂದು ಶತ್ರುಗಳನ್ನು ದಿಟ್ಟಿಸಿ ನೋಡಿದನು. ನಂತರ ವಿದುರನ ಮಧ್ಯಸ್ಥಿಕೆಯಿಂದಾಗಿ ಧೃತರಾಷ್ಟ್ರ ತನ್ನ ಪುತ್ರನಿಗೆ ದ್ರೌಪದಿಯನ್ನು ಬಿಡುವಂತೆ ಹೇಳಿದನು.

ತೃಪ್ತನಾಗದ ದುರ್ಯೋಧನನು ಮತ್ತೆ ತನ್ನ ತಂದೆಯಲ್ಲಿ ವಿನಂತಿಸಿಕೊಂಡು ಪಾಂಡವರನ್ನು ದ್ಯೂತಕ್ಕೆ ಕರೆಸಿ, ಅದರಲ್ಲಿ ಪುನ: ಶಕುನಿಯ ಕುತಂತ್ರದಿಂದಾಗಿ ಧರ್ಮಜನು ಮತ್ತೆ ಸೋತು ಪಾಂಡವರು 12ವರ್ಷ ವನವಾಸ ಮತ್ತು 1 ವರ್ಷ ಅಜ್ಞಾತವಾಸ ಮಾಡುವಂತೆ ಪಣದಂತೆ ವನವಾಸಕ್ಕೆ ಪಾಂಡವರು ತೆರಳಬೇಕಾಯಿತು.

**ಪಾಂಡವರ ವನವಾಸಾರಂಭ** – ಶಿವನ ವರದಿಂದ ಗರ್ವಿತನಾದ ಮಾಯಾವಿದ್ಯೆಯನ್ನು ಬಲ್ಲ ಕಿರ್ಮೀರನೆಂಬ ಬಕಾಸುರನ ತಮ್ಮನನ್ನು ಭೀಮನು ಸಂಹರಿಸಿದನು.

**ಸೌಗಂಧಿಕಾಹರಣ** – ಒಮ್ಮೆ ಪಾಂಡವರು ಬದರಿಯಲ್ಲಿ ವನವಾಸದಲ್ಲಿ ವಿಹರಿಸುತ್ತಿದ್ದಾಗ, ಗರುಡ ಒಂದು ಸರ್ಪವೊಂದನ್ನು ಹಿಡಿದೆಳೆದ. ಗರುಡನ ರೆಕ್ಕೆಯಿಂದ ಗಾಳಿಯಿಂದ ಆ ಪರ್ವತ ಕಂಪಿಸಲು ಒಂದು ಶ್ರೇಷ್ಟ ವಾದ ಚಿನ್ನದ ಕಮಲ ಭೀಮ–ದ್ರೌಪದಿಯರ ಬಳಿ ಬಂದು ಬಿದ್ದಾಗ, ಅದು ಆಗ ತಾನೇ ಉದಯಿಸುವ ಸೂರ್ಯನಂತೆ ಶೋಭಿಸುತ್ತಿತ್ತು, ಪರಿಮಳಭರಿತ ವಾಗಿತ್ತು. ದ್ರೌಪದಿ ತನಗೆ ಅಂತಹ ಹೂವುಗಳನ್ನು ತಂದುಕೊಡಲು ಭೀಮಸೇನನನ್ನು ಕೇಳಿಕೊಂಡಳು. ಆಗ ಭೀಮಸೇನನು ಗದೆಯೊಂದಿಗೆ ಎತ್ತರದ ಆ ಪರ್ವತವನ್ನು ವೇಗವಾಗಿ ಏರಿ, ಸಿಂಹ ಹುಲಿಗಳ ರೂಪದಲ್ಲಿದ್ದ ದೈತ್ಯರನ್ನೂ ನಾಶಪಡಿಸಿದನು. ನಂತರ ತನ್ನದೇ ಅವತಾರವಾದ ಹನುಮಂತನ ದರ್ಶನವನ್ನು ಮಾಡಿದ ಭೀಮಸೇನ. ಹನುಮಂತನು ತನ್ನ ಬಾಲವನ್ನು ಎತ್ತಲು

ಭೀಮನಿಗೆ ಹೇಳಿದಾಗ, ಭೀಮನು ತನಗೆ ಆಗುವುದಿಲ್ಲವೆಂದು ಅಸಮರ್ಥನಂತೆ ವರ್ತಿಸಿದನು. ನಂತರದಲ್ಲಿ ಭೀಮಸೇನನು ಹನುಮಂತನಲ್ಲಿ ಒಂದು ವರ ಬೇಡಿ ಹನುಮಂತನನ್ನು ತನ್ನ ತಮ್ಮನಾದ ಅರ್ಜುನನ ರಥದ ಬಾವುಟದಲ್ಲಿರುವಂತೆ ಕೋರಿದ. ಹನುಮಂತ ಸಮ್ಮತಿಸಿದ. ಹೀಗೆ ವರ ಕೇಳುವ ಮೂಲಕ ಅಸುರಜನ ಮೋಹಕರಾದರು ಭೀಮ–ಹನುಮರು.

ನಂತರ ಸೌಗಂಧಿಕಾ ಸರೋವರದಲ್ಲಿ ಬಂದಿಳಿದ ಭೀಮಸೇನನು ಅಲ್ಲಿದ್ದ ಅತ್ಯಂತ ಪರಿಮಳ ಭರಿತವೂ, ಆದ ಚಿನ್ನದ ಕಮಲಗಳನ್ನು ಕಂಡ. ಆಗ ನರಭಕ್ಷಕರಾದ, ಶಿವವರದಿಂದ ಪ್ರಭಾವಿತರಾದ ರಾಕ್ಷಸರು ಅಡ್ಡಿಯಾಗತೊಡಗಿದರು. ಉಗ್ರ ರೂಪನೂ, ಮಹಾ ಬಲಿಷ್ಟನೂ, ಅತ್ಯಂತ ಸುಂದರಾಕಾರನೂ, ಆದ ಭೀಮಸೇನನನ್ನು ನೂರುಕೋಟಿ ಸಂಖ್ಯೆಯ ಕ್ರೋಧವಶರೆಂಬ ದೈತ್ಯರು ಒಟ್ಟಾಗಿ ತಡೆದರು. ಶೈವ ಶಾಸ್ತ್ರವನ್ನು ಹೇಳುತ್ತ ಯುದ್ಧಕ್ಕೆ ಬಂದ ಅವರನ್ನು ಭೀಮಸೇನನು ವೈಷ್ಣವ ಶಾಸ್ತ್ರಗಳಿಂದಲೇ ಮೊದಲು ವಾಗ್ಯುದ್ಧದಲಿ ಸೋಲಿಸಿ, ನಂತರ ತನ್ನ ಗದೆಯಿಂದ ಎಲ್ಲರನ್ನೂ ಸಂಹರಿಸಿದನು. ಸೌಗಂಧಿಕ ಪುಷ್ಪಗಳ ಸರೋವರ ಇದ್ದದ್ದು ಕುಬೇರನ ಪಟ್ಟಣದ ಹೊರವಲಯದಲ್ಲಿ, ಮತ್ತು ಪಂಚವರ್ಣಗಳ ಪುಷ್ಪಗಳ ಸರೋವರವಿದ್ದುದ್ದು, ಕುಬೇರನ ಪಟ್ಟಣದ ಒಳವಲಯದಲ್ಲಿ. ಭೀಮನು ಎರಡೂ ಕಡೆಯಿಂದ ದ್ರೌಪದಿಗೆ ಪುಷ್ಪಗಳನ್ನು ತಂದು ಕೊಟ್ಟನು.

**ಮಣಿಮಂತನ ವಧೆ** – ಶಿವವರದಿಂದಾಗಿ ಅಜೇಯನಾಗಿದ್ದ ಕ್ರೂರಿ ಮಣಿಮಂತನನ್ನು ಮುಂದೆ ಮಾಡಿಕೊಂಡು, ಸಕಲ ರಾಕ್ಷಸರ ಗುಂಪು ಭೀಮನ ಮೇಲೆ ಮಹಾಸ್ತ್ರಗಳಿಂದ ಯುದ್ಧಕ್ಕೆ ಧಾವಿಸಿದಾಗ, ಭೀಮ ಎಲ್ಲರನ್ನೂ ಸಂಹರಿಸಿ, ಅಂಧಂತಮಸ್ಸಿಗೆ ಕಳಿಸಿದನು.

**ಅಜಗರಪ್ರಸಂಗ** – ಒಮ್ಮೆ ಭೀಮಸೇನನು ಧನುರ್ಧಾರಿಯಾಗಿ ಮೃಗಗಳನ್ನು ಭೇಟೆಯಾಡುತ್ತಾ, ದೊಡ್ಡ ಹೆಬ್ಬಾವಿನ ರೂಪದಲ್ಲಿದ್ದ ನಹುಷನನ್ನು ಸಮೀಪಿಸಿದ. ಆಗ ನಹುಷ ಭೀಮನನ್ನು ಹಿಡಿದು ಸುತ್ತುವರಿದ. ಆದರೆ ಆ ಅಜಗರನಿಗೆ ಭೀಮನನ್ನು ಅಲುಗಾಡಿಸಲೂ ಆಗಲಿಲ್ಲ. ಅವನು ಭೀಮನನ್ನು ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ ಉತ್ತರಿಸು, ಬಿಡುತ್ತೇನೆ ಎಂದಾಗ ತಾನು ವಿದ್ಯೋಪಜೀವನ ಮಾಡುವುದಿಲ್ಲವೆಂದು ತಿರಸ್ಕರಿಸಿದನು. ನಂತರ ಧರ್ಮರಾಜನು ಅಲ್ಲಿಗೆ ಬಂದು ನಹುಷನ ಪ್ರಶ್ನೆಗಳಿಗೆ ಉತ್ತರ ನೀಡಿದನು, ನಹುಷನು ಭೀಮಸೇನನನ್ನು ಬಿಟ್ಟನು.

ದ್ರೌಪದಿಯನ್ನು ಸಿಂಧುರಾಜನ ಬಳಿಗೆ ಬಾ ಎಂದು ಕರೆದ ಕೋಟಿಕಾಶ್ಯನನ್ನು ಭೀಮಸೇನ ತಲೆ ಕಡಿದು ಸಂಹರಿಸಿದನು. ಚಿತ್ರಸೇನನಿಂದ ಕೌರವರು ಪರಾಭವವಾಗಿ, ಎಲ್ಲರನ್ನೂ ಸೆರೆಹಿಡಿದಾಗ, ಭೀಮಾರ್ಜುನರು ಚಿತ್ರಸೇನರೊಂದಿಗೆ ಯುದ್ಧಮಾಡಿ, ಅವನನ್ನು ಸೋಲಿಸಿ, ದುರ್ಯೋಧನಾದಿಗಳನ್ನು ಬಿಡುಗಡೆ ಮಾಡಿದರು.

**ವಿರಾಟನಗರದಲ್ಲಿ ಪಾಂಡವರು** - ನಂತರ ಪಾಂಡವರು ೧೨ ವರ್ಷ ವನವಾಸವನ್ನು ಮುಗಿಸಿ, ಒಂದು ವರ್ಷ ಅಜ್ಞಾತವಾಸ ಮಾಡಲು ವಿರಾಟನಗರಕ್ಕೆ ಬಂದಾಗ, ಅಲ್ಲಿ ವಿರಾಟನಗರದಲ್ಲಿ ಭೀಮಸೇನನು ಒಬ್ಬ ಅಡಿಗೆಯುವನಾಗಿ ಸೇರಿಕೊಂಡು, ವಿರಾಟನಗರಕ್ಕೆ ಬಂದಿದ್ದ ಜೀಮೂತನನ್ನು ಸಂಹರಿಸಿ, ನಂತರ ಸೈರಂಧ್ರಿವೇಶದಲ್ಲಿ ದ್ರೌಪದಿಯ ಬಯಸಿದ ಕೀಚಕನನ್ನು ಭೀಮಸೇನನು ಅವನನ್ನು ಉಂಡೆಗಳನ್ನಾಗಿ ಮಾಡಿ ಸಂಹರಿಸಿದನು. 105 ಜನ ಉಪಕೀಚಕರನ್ನೂ ಸಂಹರಿಸಿದನು.

ದುರ್ಯೋಧನನು ಕೀಚಕನು ಸತ್ತುದ್ದನ್ನು ತಿಳಿದಾಗ ಅವನಿಂದ ತಕ್ಷಣ ಬಂದ ಉದ್ಗಾರವೇನೆಂದರೆ

ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ।
ಛತುರ್ಥ: ಕೀಚಕಸ್ತೇಷಾಂ ಪಂಚಮಂ ನಾನುಶುಶ್ರುಮ: ।

ಇದು ದುರ್ಯೋಧನನು ಭೀಮನ ಬಗ್ಯೆ ಇದ್ದ ಭಯದ ಸೂಚನೆ

**ದಕ್ಷಿಣ ಗೋಗ್ರಹಣ** - ಭೀಮನಿಂದ ಗೋವೋಚನ - ಸುಶರ್ಮ ಎಂಬವನು ವಿರಾಟರಾಜನನ್ನು ಸೋಲಿಸಿ ಅವನನ್ನು ಸೆರೆ ಹಿಡಿದಾಗ, ಭೀಮ ಅವನ ಮೇಲೇರಿ ಹೋಗಿ ಅವನನ್ನು ಸಂಹರಿಸಿ, ವಿರಾಟನನ್ನು ಬಿಡುಗಡೆ ಮಾಡಿದನು.

ಭೀಮಾರ್ಜುನರು ರುದ್ರದೇವರ ವರದಿಂದ ಅವಧ್ಯರಾಗಿದ್ದ 3 ಕೋಟಿ ಮಹಾರಾಕ್ಷಸರು ತೀರ್ಥಯಾತ್ರೆಗಳಿಗೆ ವಿಘ್ನವನ್ನು ಉಂಟು ಮಾಡುತ್ತಿದ್ದವರನ್ನು ಸಂಹರಿಸಿ, ಯಾತ್ರಿಕರಿಗೆ ಅನುಕೂಲ ಮಾಡಿದರು. ಪಾರ್ವತೀವರದಿಂದ ಅವಧ್ಯನಾಗಿದ್ದ ಬ್ರಾಹ್ಮಣ ವೇಶದಲ್ಲಿದ್ದ ಜಟಾಸುರನು ಒಮ್ಮೆ ಧರ್ಮಜ, ನಕುಲ-ಸಹದೇವ, ದ್ರೌಪದಿಯರನ್ನು ಎತ್ತುಕೊಂಡು ಹೋಗುತ್ತಿದ್ದಾಗ, ಭೀಮ ಅವನನ್ನು ಹಿಡಿದು, ಅವನ ತಲೆಯನ್ನೇ ಪುಡಿಪುಡಿಮಾಡಿದನು.

**ಭೀಮನ ಸಂಸಾರ** - ಅವನಿಗೆ ಒಟ್ಟು 23 ಹೆಂಡತಿಯರು, ದ್ರೌಪದಿ, ಹಿಡಿಂಬಿ, ಕಾಳಿ ಮತ್ತು ವಸುದೇವ ಪುತ್ರಿಯರಾದ 20 ಜನ

**ಕುರುಕ್ಷೇತ್ರದಲ್ಲಿ ಭೀಮಸೇನ** – ಅಭಿಮನ್ಯು ಮುಂತಾದವರ ಮೇಲೆ ಕೌರವರು ಬಾಣ ಪ್ರಯೋಗಿಸಲು, ಭೀಮ ಕೌರವರ ಮೇಲೆ ಪ್ರತಿಯಾಗಿ ಬಾಣಗಳನ್ನು ಪ್ರಯೋಗಿಸಿ ಅಭಿಮನ್ಯುವನ್ನು ರಕ್ಷಿಸಿದ. ಭೂರಿಶ್ರವನು ಸಾತ್ಯಕಿಯ ಹತ್ತೂ ಮಕ್ಕಳನ್ನು ಸಂಹರಿಸಲು ಭೀಮನು ಸಾತ್ಯಕಿಯನ್ನು ರಕ್ಷಿಸಿದನು. ಏಳನೇ ದಿನದ ಯುದ್ಧದಲ್ಲಿ ಭೀಮಸೇನನು ಭೀಷ್ಮರನ್ನು ಸಾರಥಿ ರಹಿತನನ್ನಾಗಿ ಮಾಡಿ ಶತ್ರುಗಳ ಮೇಲೆ ನುಗ್ಗಿದನು, ಭೀಮಸೇನನ ಬಾಣದಿಂದ ದ್ರೋಣರು ಮೂರ್ಛೆಗೊಂಡರು. 8ನೇ ದಿನದ ಯುದ್ಧದಲ್ಲಿ ದ್ರೋಣ, ಅಶ್ವತ್ಥಾಮ, ಭಗದತ್ತ, ಕೃಪ,

ಚಿತ್ರಸೇನರು ಭೀಮಸೇನನನ್ನು ಮುತ್ತಲು, ಭೀಮಸೇನ ಅವರನ್ನೆಲ್ಲ ಹಿಮ್ಮೆಟ್ಟಿಸಿದಾಗ, ಚಿತ್ರಸೇನನು ಪಲಾಯನಗೈದನು.

11ನೇ ದಿನ ಭೀಮ-ಶಲ್ಯರು ಗದಾಯುದ್ಧದಲ್ಲಿ ನಿಪುಣರಾಗಿದ್ದು, ಘೋರ ಯುದ್ಧವಾಡಿದರು, ಕಡೆಗೆ ಶಲ್ಯರಾಜನು ಮೂರ್ಛೆಗೊಂಡಾಗ, ಕೃಪಾಚಾರ್ಯರು, ಶಲ್ಯನನ್ನು ತನ್ನ ರಥದಲ್ಲಿ ಹಾಕಿಕೊಂಡು ಹೊರಟರು. ಭೀಮನನ್ನು ಬಾಣಾಗಳ ಸುರಿಮಳೆಗೊಯ್ದು ದ್ರೋಣರು ಅಡ್ಡಗಟ್ಟಲು, ಭೀಮಸೇನ ಗದೆಯಿಂದ ದ್ರೋಣಾಚಾರ್ಯರ ಒಟ್ಟು 8 ರಥಗಳನ್ನು ಪುಡಿಮಾಡಿದರು, ನಂತರದಲ್ಲಿ ಭೀಮನಿಂದ ವಿಂದ, ಅನುವಿಂದ, ಮೊದಲಾದ ಕೌರವರ ಹನ್ನೆರಡು ಮಂತ್ರಿಗಳ ವಧೆ. ನಂತರದಲ್ಲಿ ಕೃತವರ್ಮನನ್ನೂ ಸೋಲಿಸಿದಾಗ, ಅವನು ಯುದ್ಧವನ್ನೇ ತೊರೆದು ತೆರಳಿದ.

ಭೀಮಸೇನ ಒಮ್ಮೆ ಸಿಂಹನಾದ ಮಾಡಿದೊಡನೆಯೇ ಆ ಮಹಾ ಘೋಷದಿಂದ ಅನೇಕ ಕೌರವ ಸೈನಿಕರು ಮಲಮೂತ್ರ ವಿಸರ್ಜನೆ ಮಾಡಿದರು, ರಕ್ತವಾಂತಿ ಮಾಡಿದರು, ಕೆಲವರು ತಕ್ಷಣದಲ್ಲೇ ಸತ್ತರು. ಭೀಮನು ವಿಕರ್ಣಾದಿಗಳನ್ನು ಸಂಹರಿಸಿ ಕರ್ಣನನ್ನು ಸೋಲಿಸಿದನು. ಒಟ್ಟು 21 ಭಾರಿ ಭೀಮಸೇನನಿಂದ ಕರ್ಣ ಸೋಲೊಪ್ಪಿದನು. 22ನೇ ಭಾರೀ ಯುದ್ಧಕ್ಕೆ ಬಂದಾಗ ಕರ್ಣನು ಪರಶುರಾಮರು ನೀಡಿದ್ದ ರಥ, ಧನಸ್ಸು, ಮೊದಲಾದುವನ್ನು ಯುದ್ಧಕ್ಕೆ ತಂದನು. ಭೀಮನಿಂದ ಕರ್ಣನ ಕವಚ ಕುಂಡಲ ನಾಶ. ಕಡೆಗೆ ಭೀಮಸೇನದೇವರು ಪರಶುರಾಮರು ಕರ್ಣನಿಗೆ ನೀಡಿದ್ದ

ವರ "ಸ್ಪರ್ಧೆ ಮಾಡದಿದ್ದಲ್ಲಿ ಎಲ್ಲರನ್ನೂ ಗೆಲ್ಲುವಿ" ಎಂಬ ವರದಂತೆ, ಕರ್ಣನಿಗೂ ಒಂದು ಅವಕಾಶ ಕೊಡಲು, ಕರ್ಣ ತನ್ನ ಅಸ್ತ್ರಸಾಮರ್ಥ್ಯದಿಂದ ಭೀಮನ ಬಿಲ್ಲನ್ನು ತುಂಡಿಸಿದ, ಕುದುರೆಗಳ ಹಗ್ಗಗಳನ್ನೂ ಕತ್ತರಿಸಿದ. ಆಗ ಭೀಮಸೇನ ರಥದಿಂದ ಕೆಳಗಿಳಿದು, ಕರ್ಣನ ರಥವನ್ನೇರಿದ. ಆಗ ಭಯಗೊಂಡ ಕರ್ಣ ರಥದ ನೊಗದ ಕೆಳಗೆ ಅಡಗಿ ಕುಳಿತಾಗ, ಭೀಮಸೇನನು ನಿರಾಯುಧನಾಗಿಯೂ ಶತ್ರು ನಿಗ್ರಹ ಮಾಡಬಲ್ಲನೆಂಬುದನ್ನು ತೋರಿ, ವಾಪಸ್ಸು ಕರ್ಣನ ರಥದಿಂದ ಕೆಳಗೆ ಹಾರಿದ. ಕರ್ಣ ಅರ್ಜುನನಿಗೆ ಮೀಸಲಾಗಿದ್ದರಿಂದ ಭೀಮನು ಅವನನ್ನು ಕೊಲ್ಲಲಿಲ್ಲ.

ಭೀಮಸೇನನು ಕಾಲಿಂಗನನ್ನು ಮುಷ್ಟಿಪ್ರಹಾರದಿಂದಲೇ ಸಂಹರಿಸಿದನು. ಕೇತುಮಂತ ಮೊದಲಾದವರನ್ನೆಲ್ಲ ವಧೆಮಾಡಿದನು. ಮತ್ತು ಕರ್ಣನ ತಮ್ಮಂದಿರಾದ ಧ್ರುವ (ಅಧಿರಥ – ರಾಧೇಯ ಪುತ್ರರು) ಮೊದಲಾದವರನ್ನೆಲ್ಲ ಸಂಹರಿಸಿದನು.

ಬಾಹ್ಲೀಕ ರಾಜನು ಭೀಮನ ಮೇಲೆ ಬಾಣ ಪ್ರಯೋಗಿಸಲು ಭೀಮನು ಅವನ್ನು ಮೂರು ತುಂಡಾಗಿಸಿದನು. ಬಾಹ್ಲೀಕ ಶತಘ್ನೀ ಎಂಬ ಆಯುಧದಿಂದ ಅಪ್ಪಳಿಸಲು, ಭೀಮನು ಬಾಹ್ಲೀಕನಿಗೆ ಹೊಡೆದ, ಅವನು ಸತ್ತುಹೋದ (ಬಾಹ್ಲೀಕನೇ ಪ್ರಹ್ಲಾದರಾಜನ ಅವತಾರ). ಬಾಹ್ಲೀಕ ಭೀಮನನ್ನು ಕೇಳಿಕೊಂಡಿದ್ದ "ನೀನೇ ನನ್ನನ್ನು ಸಂಹರಿಸಬೇಕೆಂದು". ಅದರಂತೆ ಭೀಮ ಕೊಂದ.

ಭೀಮಸೇನ ಎಂದೂ ವೈಷ್ಣವರನ್ನು ಸಂಹರಿಸುವುದಿಲ್ಲ. ಬಾಹ್ಲೀಕರೊಬ್ಬರೇ ಭೀಮಸೇನನಿಂದ ಹತನಾದ ವೈಷ್ಣವರು.

ಭೀಮಾರ್ಜುನರು ಅಶ್ವತ್ಥಾಮರನ್ನು ದೊಡ್ಡಸೇನೆಯೊಂದಿಗೆ ದೂರದಲ್ಲಿಯೇ ತಡೆದು ನಿಲ್ಲಿಸಿ, ಜಯತ್ಸೇನನನ್ನು ಭೀಮನು ಸಂಹರಿಸಿದನು, ಮತ್ತು ಅಶ್ವತ್ಥಾಮನೆಂಬ ಗಜದ ಸಂಹಾರವನ್ನು ಮಾಡಿದನು. ಅಶ್ವತ್ಥಾಮನಿಂದ ನಾರಾಯಣಾಸ್ತ್ರ ಪ್ರಯೋಗವಾದಾಗ ಭೀಮನ ಹೊರತು ಎಲ್ಲರೂ ಭೀತರಾದರು, ದೂರ ಹೋದರು. ಆದರೆ ಭೀಮ ಮಾತ್ರ ಅಗ್ನಿಯ ಮಧ್ಯೆ ಅಗ್ನಿಯಂತೆ ಸುಡದೇ ನಿಂತಾಗ ಅರ್ಜುನ ತನ್ನ ಪಾಲಿನ ಪ್ರೀತಿಯನ್ನು ತೋರಿಸಲು, ಭೀಮನನ್ನು ರಕ್ಷಿಸಲು ವಾರುಣಾಸ್ತ್ರವನ್ನು ಪ್ರಯೋಗಿಸಿದ. ವಾರುಣಾಸ್ತ್ರದಿಂದ ಹೊರಗೆ ಸುತ್ತುವರಿದಿದ್ದರಿಂದಲೂ ಕೃಷ್ಣನೊಂದಿಗೆ ಕೂಡಿದ್ದರಿಂದಲೂ, ನರನ ಆವೇಶ ಹೊಂದಿದ್ದರಿಂದಲೂ ಆ ನಾರಾಯಣಾಸ್ತ್ರ ಅರ್ಜುನನನ್ನು ಸುಡಲಿಲ್ಲ. ಅವರಿಬ್ಬರಿಂದ ಭೀಮ ರಥದಿಂದ ಕೆಳಗಿಳಿಸಲ್ಪಟ್ಟು ಅವನ ಆಯುಧವನ್ನು ಕಿತ್ತುಕೊಂಡಿದ್ದರಿಂದ ಆ ನಾರಾಯಣಾಸ್ತ್ರ ಶಾಂತವಾಯಿತು.

**ಭೀಮನು ನಾರಾಯಣಾಸ್ತ್ರಕ್ಕೆ ಏಕೆ ವಂದಿಸಲಿಲ್ಲ** – ನಾರಾಯಣಾಸ್ತ್ರಕ್ಕೆ ಅಭಿಮಾನಿ ದೇವತೆ ವಾಯುವೇ. ಪ್ರತಿಪಾದ್ಯ ದೇವತೆ ಸಾಕ್ಷಾತ್ ಶ್ರೀ ಹರಿ. ಆ ಅಸ್ತ್ರವು ಭೀಮನ ಸ್ವರೂಪವೇ

ಅಗಿದ್ದರಿಂದ ಅಗ್ನಿಯನ್ನೇ ಅಗ್ನಿ ಹೇಗೆ ಸುಡುವುದಿಲ್ಲವೋ, ಹಾಗೆ ಭೀಮನನ್ನು ಅದು ಸುಡಲಿಲ್ಲ.

**16**ನೇ ದಿನ ಭೀಮನಿಂದ ಕ್ಷೇಮಧೂರ್ತಿಯ ವಧೆ. ಭೀಮನೊಂದಿಗೆ ಯುದ್ಧಕ್ಕೆ ಇಳಿದ ಅಶ್ವತ್ಥಾಮರು ಮೂರ್ಛೆಗೊಂಡರು. ದುರ್ಯೋಧನ ಪಲಾಯನಗೈದ. **17**ನೇ ದಿನ ಕರ್ಣನ ಮೇಲೆ ಕೆರಳಿದ ಭೀಮ ಆಕ್ರಮಣ ಮಾಡಲು, ಭೀಮನ ಬಾಣಕ್ಕೆ ನಿಶ್ಚೇಷ್ಟನಾದ ಕರ್ಣ. ನಂತರದಲ್ಲಿ ಶಲ್ಯನು ಭೀಮನನ್ನು ಪ್ರಾರ್ಥಿಸಲು, ಕರ್ಣನನ್ನು ಬಿಟ್ಟನು.

ದುಶ್ಯಾಸನ ವಧೆ – ಭೀಮಸೇನ ಕರ್ಣನ ಮಗನಾದ ಸುಷೇಣನನ್ನು, ಸತ್ಯಸೇನನನ್ನೂ ಸಂಹರಿಸಿದ. ದುಶ್ಯಾಸನನ ಕತ್ತನ್ನು ಒತ್ತಿ ಅವನ ಹೊಟ್ಟೆಯ ಮೇಲೆ ಕುಳಿತು ಬಹಳ ಕೋಪದಿಂದ ಕೂಡಿದವನಾಗಿ ಅವನ ಮುಖವನ್ನೇ ದಿಟ್ಟಿಸುತ್ತಾ ಅವನ ಎದೆಯಲ್ಲಿ ಜೋರಾಗಿ ಚುಚ್ಚಿದಾಗ, ರಕ್ತದ ಮಡುವೇ ನಿರ್ಮಾಣವಾಗಿ, ಬಾಯಾರಿದವನು ಅಮೃತವನ್ನು ಕುಡಿಯುವಂತೆ ಅವನ ರಕ್ತವನ್ನು ಕುಡಿದು ತನ್ನ ಪ್ರತಿಜ್ಞೆ ನೆರವೇರಿಸಿದನು. ಇಲ್ಲಿ ನಿಜವಾಗಿಯೂ ಅವನು ರಕ್ತವನ್ನು ಕುಡಿಯಲಿಲ್ಲ, ಕುಡಿದಂತೆ ತನ್ನ ಬಾಯಿಗೆ ಆ ರಕ್ತವನ್ನು ಒರೆಸಿಕೊಂಡು ಪ್ರಕಟಿಸಿದನಷ್ಟೆ

ಭೀಮಸೇನನು ದುಶ್ಯಾಸನನ ಸಂಹಾರವನ್ನು ಮನ್ಯುನಾಮಕ ನೃಸಿಂಹದೇವರಿಗೆ ಮನ್ಯುಸೂಕ್ತ ಪಠಿಸುತ್ತ ಸಮರ್ಪಿಸಿದನು

## ದುರ್ಯೋಧನ ವಧ –





ಭೀಮಸೇನ ಎಲ್ಲಾ ಕೌರವರನ್ನೂ ಸಂಹರಿಸಿದನು. ಭೀಮನಿಂದ ಪರಾಜಿತನಾದ ದುರ್ಯೋಧನ ದ್ವೈಪಾಯನ ಸರೋವರದಲ್ಲಿ, ಜಲಸ್ಥಂಬ ವಿದ್ಯೆಯಲ್ಲಿ ಅವಿತಿಟ್ಟುಕೊಂಡಿದ್ದನು. ಆಗ ಧರ್ಮರಾಜನು ಅವನನ್ನು ಹೊರಗೆ ಬರುವಂತೆ ಪ್ರೇರೇಪಿಸಿದಾಗ, ಕೋಪದಿಂದ ನೀರಿನಿಂದ ಹೊರಗೆ ಬಂದು ಭೀಮನೊಡನೆ ಯುದ್ಧಕ್ಕೆ ನಿಂತನು. ಭೀಮ–ದುರ್ಯೋಧನರು ಗದಾಯುದ್ಧದಲ್ಲಿ ಹೋರಾಡಿದರು. ತನ್ನ ಇಬ್ಬರೂ ಶಿಷ್ಯರೂ ಯುದ್ಧದಲ್ಲಿ ನಿರತರಾಗಿರುವುದನ್ನು ತಡೆಯಲು ಬಲರಾಮ ಕೇಳಿದರೂ, ಇವರಿಬ್ಬರೂ ಒಪ್ಪಲಿಲ್ಲ. ಭೀಮಸೇನದೇವರು ತಮ್ಮ ಪ್ರತಿಜ್ಞೆಯನ್ನು ಜ್ಞಾಪಿಸಿ ದುರ್ಯೋಧನನ ತೊಡೆಯನ್ನು ಮುರಿದೇ ಬಿಟ್ಟರು. ಅವನು ಅಪ್ಪಳಿಸಿ ಕೆಳಗೆ ಬಿದ್ದ. ನಂತರದಲ್ಲಿ ದುರ್ಯೋಧನನ ತಲೆಯ ಮೇಲೆ ತುಳಿಯತೊಡಗಿದ. ನಂತರದಲ್ಲಿ ದುರ್ಯೋಧನನನ್ನು ಸಂಹಾರಮಾಡಿದನು.

**ಭೀಮನ ಕಬ್ಬಿಣದ ಆಕೃತಿ ಪುಡಿಪುಡಿ** - ಧೃತರಾಷ್ಟ್ರನು ಪಾಂಡವರೆಲ್ಲ ದುರ್ಯೋಧನಾದಿಗಳ ಸಂಹಾರದ ನಂತರ ನಮಸ್ಕರಿಸಲು ಬಂದಾಗ ಎಲ್ಲರನ್ನು ಆಶೀರ್ವದಿಸಿದನು. ಆದರೆ ಭೀಮನು ನಮಸ್ಕರಿಸಲು ಬಂದಾಗ, ಕೃಷ್ಣನು ಭೀಮನ ಬದಲು ಮೊದಲೇ ಹೇಳಿ ಮಾಡಿಸಿದ್ದ ಭೀಮನ ಕಬ್ಬಿಣದ ಆಕೃತಿಯನ್ನು ಧೃತರಾಷ್ಟ್ರನ ಮುಂದೆ ತಂದು ನಿಲ್ಲಿಸಿದನು. ತನ್ನ ಕೋಪವನ್ನೆಲ್ಲ ಒಮ್ಮೆಲೇ ಕೂಡಿಸಿ ಅದನ್ನು ಬಿಗಿಯಾಗಿ ಅಪ್ಪಿಕೊಂಡಾಗ ಆ ವಿಗ್ರಹ ಪುಡಿಪುಡಿಯಾಯಿತು. ಇದರಲ್ಲಿ ಒಂದು ಅನುಮಾನ ಬರಬಹುದು. ಕೃಷ್ಣನು ಭೀಮನಿಗೂ ಹೀಗೇ ಪುಡಿಪುಡಿಯಾಗುವ ಭಯದಿಂದ ಹಿಂದೆ ಕಳಿಸಿದನೇ? ಖಂಡಿತ ಅಲ್ಲ. ಇಡೀ ಕೌರವರ ಬಲವನ್ನೆಲ್ಲ ತನ್ನ ಕೈಯಿಂದಲೇ ಸಂಹರಿಸಿದ ಭೀಮನಿಗೆ ಏನೂ ಆಗುತ್ತಿರಲಿಲ್ಲ. ಆದರೆ ಕೃಷ್ಣನು ಧೃತರಾಷ್ಟ್ರನಲ್ಲಿದ್ದ ಕೋಪವನ್ನು ಪ್ರಕಟ ಮಾಡಲು ಈ ತಂತ್ರವನ್ನು ಮಾಡಿದನಷ್ಟೆ.

**ಧೃತರಾಷ್ಟ್ರನಿಗೆ ವೈರಾಗ್ಯಕ್ಕೆ ಭೀಮಸೇನನಿಂದ ಆಹ್ವಾನ** - ಧೃತರಾಷ್ಟ್ರನು ತನ್ನ ಎಲ್ಲಾ ಮಕ್ಕಳನ್ನು ಕಳೆದುಕೊಂಡರೂ, ಅವನಿಗಿನ್ನೂ ವೈರಾಗ್ಯ ಬಂದಿರಲಿಲ್ಲ. ಅದನ್ನು ಗಮನಿಸಿದ ಭೀಮನು ಅವನನ್ನು ಸಿಕ್ಕಾಗಲೆಲ್ಲ ಅವನನ್ನು ದೂಷಿಸಿ, ಅವನನ್ನು ಕೆಣಕುತ್ತಿದ್ದನು. ಬೇಕೆಂದೇ ಧೃತರಾಷ್ಟ್ರನ ಮುಂದೆ ನಿಂತುಕೊಂಡು ನಕುಲ ಸಹದೇವರಿಗೆ ಹೇಳುವಂತೆ ಹೇಳುತ್ತಿದ್ದನು "ನೋಡು, ಇದೇ ನನ್ನ ಕೈಯಿಂದಲೇ ಈ ಪಾಪಿಯ ಮಕ್ಕಳನ್ನೆಲ್ಲ ಕೊಂದೆ". ಅವನಿಗೆ ಆಹಾರ ಕೊಡುವಾಗಲೂ ದೂಷಿಸುತ್ತಿದ್ದನು.

**ತನ್ನ ಮಕ್ಕಳ ತಿಥಿಗೆ ಖರ್ಚಿಗೆ ಕಾಸನ್ನೂ ಕೊಡಲಿಲ್ಲ. ಇದು ಭೀಮನು ಅವನನ್ನು ವೈರಾಗ್ಯಕ್ಕೆ ತರುವ ಮಾರ್ಗವಾಗಿತ್ತು.**




ಈ ಲೇಖನವನ್ನು ನಮ್ಮ ಪೂಜ್ಯ ತಂದೆಯವರಾದ ಮ/ಶಾ/ಸಂ ಶ್ರೀ ರಾಮಚಂದ್ರಾಚಾರ್ಯರ ಆಶೀವಾದದೊಂದಿಗೆ, ನಮ್ಮ ಗುರುಗಳಾದ ಮ/ಶಾ/ಸಂ ಶ್ರೀ ಹೊಳವನಹಳ್ಳಿ ಶ್ರೀನಿವಾಸಾಚಾರ್ಯರ ಆಶೀರ್ವಾದದಿಂದ ಹನುಮಭೀಮಮಧ್ವಾಂತರ್ಗತ ನಮ್ಮ ಕುಲದೈವ ಚಿಂತಲವಾಡಿ ನರಸಿಂಹದೇವರಿಗೆ ಸಮರ್ಪಿಸುತ್ತಿದ್ದೇನೆ.

**ಸಂಗ್ರಹ – ನರಹರಿ ಸುಮಧ್ವ**